ವಿರೋಧ ಮಾಡುವುದಕ್ಕೆ ಅಧಿಕಾರ ಇದೆ. ಆದರೆ ಮುಂಚಿತವಾಗಿಯೇ ವಿರೋಧ ಮಾಡುವ ಹಾಗೆ ಇಲ್ಲ. ಈಗ ವಿಧೇಯಕವನ್ನು ಮಂಡನೆ ಮಾಡುವುದಕ್ಕೆ ಅಧಿಕಾರ ಇದೆ, ಆದ್ದರಿಂದ ಇದನ್ನು ತಡೆ ಹಿಡಿಯುವುದಕ್ಕಾಗುವುದಿಲ್ಲ.

(ಗೊಂದಲ)

ಶ್ರೀ ಕೆ.ಹೆಚ್.ರಂಗನಾಥ್ (ಅರಣ್ಯ ಸಚಿವರು): ಮಾನ್ಯ ಅಧ್ಯಕ್ಷರೆ, ಮೊದಲು ವಿಧೇಯಕವನ್ನು ಮಂಡನೆ ಮಾಡುವುದಕ್ಕೆ ತಮ್ಮ ಅಪ್ಪಣೆ ಬೇಕು. ಆದ್ದರಿಂದ ನಿಮ್ಮ ಅಪ್ಪಣೆಯನ್ನು ಕೇಳುತ್ತಿದ್ದೇವೆ. ಅನಂತರ ಅವರು ವಿರೋಧ ಮಾಡುವುದಾದರೆ ಮಾಡಲಿ, ನಮಗೇನು ತೊಂದರೆ ಇಲ್ಲ.

ಶ್ರೀ ಡಿ.ಪಿ.ಸದಾನಂದಗೌಡ: ಸಮಸ್ಯೆ ಬಗ್ಗೆ ನಿಜವಾದ ಕಳವಳವಿರುವುದು ನಮಗೆ. ಆದ್ದರಿಂದ, ನಾವು ಇದರ ಬಗ್ಗೆ ಮೊದಲು ಮಾತನಾಡಬೇಕು.

ಅಧ್ಯಕ್ಷರು: ಮೀನುಗಾರರ ವಿಷಯದ ಬಗ್ಗೆ ಮಾತನಾಡಲು ಈಗಾಗಲೇ 5 ಜನ ಸದಸ್ಯರು ನನಗೆ ನೋಟೀಸ್ ಕೊಟ್ಟಿದ್ದಾರೆ. ಆದ್ದರಿಂದ, ಅವರುಗಳು ಮೊದಲು ಮಾತನಾಡಲಿ, ನಂತರ ನಿಮಗೂ ಅವಕಾಶ ಕೊಡುತ್ತೇನೆ.

(ಅ) ಕರಾವಳಿಯ ಮೀನುಗಾರರ ದೋಣಿಗಳಿಗೆ ಡೀಸೆಲ್ ಮೇಲಿನ ಮಾರಾಟ ತೆರಿಗೆ.

+ ಶ್ರೀ ಯು.ಆರ್.ಸಭಾಪತಿ (ಉಡುಪಿ): ಮಾನ್ಯ ಸಭಾಧ್ಯಕ್ಷರೆ, 1999-2000 ಸಾಲಿಗೆ ಮುಂಗಡಪತ್ರವನ್ನು ಮಂಡಿಸುವಾಗ ಈ ಸದನದಲ್ಲಿ ವಿತ್ತಸಚಿವರು ಮೀನುಗಾರರು ಬಳಸುವ ಯಾಂತ್ರೀಕೃತ ದೋಣಿಗಳಿಗೆ ಉಪಯೋಗಿಸುವ ಡೀಸೆಲ್ ಮೇಲಿನ ಮಾರಾಟ ತೆರಿಗೆಯನ್ನು ಸಂಪೂರ್ಣವಾಗಿ ರದ್ದುಪಡಿಸಲಾಗಿದೆ ಎಂದು ಪ್ರಕಟಪಡಿಸಿದ್ದರು. ಅದನ್ನು ಕೇಳಿ ನಾವು ಹರ್ಷ ಚಿತ್ತರಾದೆವು ಮತ್ತು ಸ್ಪಷ್ಟೀಕರಣವನ್ನು ಕೇಳಿದ್ದೆವು. ಇದನ್ನು ಸಂಪೂರ್ಣವಾಗಿ ರದ್ದುಗೊಳಿಸಲಾಗಿದೆ ಎಂದು ಆ ದಿನ ಆಗಿನ ಮೀನುಗಾರಿಕಾ ಸಚಿವರು ಕೂಡ ಇಲ್ಲಿ ಪ್ರಕಟಪಡಿಸಿದ್ದರು. ಆದರೆ ನಮ್ಮ ದುರ್ದೈವ ನಮ್ಮ ಸದನದ ನಿರ್ಣಯಗಳಿಗೆ ವಿರುದ್ಧವಾಗಿ ಒಂದು ಮುಂಗಡಪತ್ರದಲ್ಲಿ ಪ್ರಕಟವಾಗಿರುವಂತಹ ವಿಚಾರವನ್ನು ಅಧಿಕಾರಿಗಳು ತಿರುಚಿ ಡೀಸೆಲ್ ಮೇಲಿನ ಮಾರಾಟ ತೆರಿಗೆಯನ್ನು ಕೇವಲ 30 ಕಿಲೋ ಸಾವಿರ ಲೀಟರ್‌ಗೆ ಸೀಮಿತಗೊಳಿಸಿ ಇಲ್ಲಿಯವರೆಗೆ ನಡೆಸಿಕೊಂಡು ಬಂದಿದ್ದಾರೆ. ಆ ಸರ್ಕಾರ ಹೋದ ಮೇಲೆ ಈಗ ನಮ್ಮ ಸರ್ಕಾರ ಬಂದಿರಬಹುದು, ಇದರ ಬಗ್ಗೆ ನಾವು ಸಾಕಷ್ಟು ಮನವರಿಕೆಯನ್ನು ಮಾಡಿದ್ದೇವೆ. ಜನವರಿ -19ನೇ ತಾರೀಖಿಗೆ ಮಾನ್ಯ

ಮುಖ್ಯಮಂತ್ರಿಗಳು ಉಡುಪಿಗೆ ಬಂದಾಗ, ಅವತ್ತಿನ ಪ್ರಗತಿ ಪರಿಶೀಲನಾ ಸಭೆಯಲ್ಲಿ ಕೂಡ ನಾನು ಈ ವಿಷಯವನ್ನು ಅವರಿಗೆ ಹೇಳಿದೆ. ಡೀಸೆಲ್ ಮೇಲಿನ ಮಾರಾಟ ತೆರಿಗೆಯನ್ನು ಸಂಪೂರ್ಣವಾಗಿ ರದ್ದುಗೊಳಿಸಲಾಗಿದೆ ಎಂದು ಸದನದ ಮುಂಗಡಪತ್ರದಲ್ಲಿ ಅನೌನ್ಸ್ ಮಾಡಿದ ಮೇಲೆ ಮತ್ತೆ 30,000 ಲೀಟರ್‌ಗೆ ಸೀಮಿತ ಎಂದು ಅಧಿಕಾರಿಗಳು ಈ ಸದನದ ನಿರ್ಣಯವನ್ನು ಉಲ್ಲಂಘಿಸಲು ಕಾರಣವೇನು? ಇದು ಸದನಕ್ಕೆ ಮಾಡಿದ ಅಪಚಾರವೆಂದು ನಾನು ಹೇಳುವುದಕ್ಕೆ ಬಯಸುತ್ತೇನೆ. ಅಂತಹ ಅಧಿಕಾರಿಗಳನ್ನು ಇಲ್ಲಿಗೆ ಕರೆಸಿ ಕ್ಷಮೆಯಾಚನೆ ಮಾಡಿಸಬೇಕೆಂದು ನಾನು ಹೇಳುತ್ತೇನೆ. ಇವತ್ತು ಕರಾವಳಿಯ ಮೀನುಗಾರರು ಬಹಳಷ್ಟು ಕಷ್ಟನಷ್ಟದಲ್ಲಿ ಇದ್ದಾರೆ. ಕಳೆದ ಎರಡು ವರ್ಷಗಳಿಂದ ಬಹಳಷ್ಟು ಬವಣೆಯನ್ನು ಪಟ್ಟುಕೊಂಡಿರುವುದರಿಂದ ಡೀಸೆಲ್ ಮೇಲಿನ ಮಾರಾಟ ತೆರಿಗೆಯನ್ನು ರದ್ದುಮಾಡಿದ್ದಾರೆ. ಈ ವರ್ಷ ಮೀನುಗಾರಿಕೆಯ ಉತ್ಪನ್ನ ಕಡಿಮೆ ಇದ್ದರೂ ಕೂಡ ಇಲ್ಲಿ ಮಂತ್ರಿಗಳಿಗೆ ಕರಾವಳಿಯ ಮೀನುಗಾರಿಕ ಅತ್ಯಂತ ಗರಿಷ್ಠ ಹಂತದಲ್ಲಿದೆ ಎಂದು ಹೇಳುತ್ತಿದ್ದಾರೆ. ಇವತ್ತು ಕರಾವಳಿಯ ಉದ್ದಕ್ಕೂ ಕೂಡ ನೂರಾರು ದೋಣಿಗಳನ್ನು ಕಿನಾರೆಗೆ ತಂದಿಟ್ಟುಕೊಂಡು ಮೀನುಗಾರರು ಸ್ಟ್ರೈಕ್ ಮಾಡುತ್ತಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಯಾವ ಮುಂಗಡ ಪತ್ರದಲ್ಲಿ ಈ ಡೀಸೆಲ್ ಮೇಲಿನ ಮಾರಾಟ ತೆರಿಗೆಯನ್ನು ರದ್ದುಪಡಿಸಿದ್ದಾರೆಂದು ಸ್ಪಷ್ಟೀಕರಣವನ್ನು ಕೊಟ್ಟಿದ್ದಾರೋ ಅದೇ ಪ್ರಕಾರ ಡೀಸೆಲ್ ಮೇಲಿನ ಮಾರಾಟ ತೆರಿಗೆಯನ್ನು ರದ್ದುಗೊಳಿಸಬೇಕು, ಇದಲ್ಲದೆ ಮುಂದಿನ ವರ್ಷದ 2000-2001ನೇ ಸಾಲಿನ ಮುಂಗಡಪತ್ರದಲ್ಲಿ ಕೂಡ ಅದೇ ರೀತಿಯಾದ ಮಾರಾಟ ತೆರಿಗೆಯನ್ನು ರದ್ದುಗೊಳಿಸುವಂತಹ ಪ್ರಕಟಣೆಯನ್ನು ಮಾಡಬೇಕೆಂದು ನಾನು ತಮ್ಮ ಮೂಲಕ ಸರ್ಕಾರವನ್ನು ವಿನಂತಿಸುತ್ತೇನೆ.

SRI M.Y.GORPHADE: What about the introduction of the Bill?

ಅಧ್ಯಕ್ಷರು: ಇವತ್ತು ವಿಧೇಯಕವನ್ನು ಮಂಡನೆ ಮಾಡಿಸುವುದು ಡಫಿನೆಟ್ It may be in half an hour itself.

SRI M.Y.GORPHADE: From the day one this has been on the agenda. So it is our right to put it before the House. They can oppose. We have to seek your permission to place this bill before the House. It takes two minutes to introduce the bill. What is the difficulty, what is the objection, they can say. But they cannot

prevent us from placing the bill on the table of the House.

ಅಧ್ಯಕ್ಷರು: ಸಾಮಾನ್ಯವಾಗಿ ಪ್ರಶ್ನೋತ್ತರ ವೇಳೆ ಮುಗಿದ ನಂತರ ಶೂನ್ಯ ವೇಳೆಯಲ್ಲಿ ಒಂದೆರಡು ಪ್ರಶ್ನೆಗಳನ್ನು ಎತ್ತುತ್ತಾರೆ. ಅರ್ಧಗಂಟೆಯಲ್ಲಿ ಅವರು ಮಾತನಾಡಿ ಮುಗಿಸುತ್ತಾರೆ ನಂತರ at any cost it will be introduced today. We will allow it. Don't worry.

ಶ್ರೀ ವಸಂತ ವಿ.ಸಾಲಿಯಾನ (ಕಾಪು): ಮಾನ್ಯ ಅಧ್ಯಕ್ಷರೆ, 1999-2000 ಬಜೆಟ್‌ನಲ್ಲಿ ಆಗಿನ ವಿತ್ತ ಸಚಿವರು ಡೀಸೆಲ್ ಮಾರಾಟ ತೆರಿಗೆಯನ್ನು ಸಂಪೂರ್ಣವಾಗಿ ರದ್ದು ಮಾಡುತ್ತೇವೆಂದು ಇಲ್ಲಿ ಘೋಷಣೆಯನ್ನು ಮಾಡಿದ್ದರು. ಅದೇ ರೀತಿಯಾಗಿ ಅವತ್ತಿನ ದಿವಸ ಆಗಿನ ಮಾನ್ಯ ಮೀನುಗಾರಿಕಾ ಸಚಿವರಾಗಿದ್ದ ಶ್ರೀ ಜಯಪ್ರಕಾಶ್‌ಹೆಗಡೆಯವರು ಅದಕ್ಕೆ ಸ್ಪಷ್ಟನೆಯನ್ನು ಕೊಟ್ಟು ಇದನ್ನು ರದ್ದತಿ ಮಾಡುತ್ತೇವೆಂದು ಹೇಳುವ ರೀತಿಯಲ್ಲಿ ಮಾತುಕತೆಯಾಗಿತ್ತು. ಅಲ್ಲಿ ಏನಾಗಿದೆ ಎಂದರೆ ಕೇವಲ 30,000 ಲೀಟರ್‌ಗೆ ಮಾತ್ರ ನಾವು ಸಬ್ಸಿಡಿ ಕೊಡುತ್ತೇವೆ ಎನ್ನುವ ರೀತಿಯಲ್ಲಿ ಈಗಾಗಲೇ ಅಧಿಕಾರಿಗಳು ಅದನ್ನು ಸೀಮಿತಗೊಳಿಸಿದ್ದಾರೆ. ನಾವು ಇವತ್ತು ಈ ಸದನದಲ್ಲಿ ತಮ್ಮ ಮುಖೇನ ಮತ್ತು ನಮ್ಮ ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾವು ಬೇಡಿಕೊಳ್ಳುವುದಿಷ್ಟೆ ಈ ವರ್ಷದ ಬಜೆಟ್‌ನಲ್ಲಿಯೂ ಸಹ ಮೀನುಗಾರರಿಗೆ ಡೀಸೆಲ್ ಮೇಲಿನ ಮಾರಾಟ ತೆರಿಗೆಯನ್ನು ಸಂಪೂರ್ಣವಾಗಿ ರದ್ದತಿ ಮಾಡಬೇಕೆಂದು ಹೇಳಿ ಈ ಸದನದ ಮುಖಾಂತರ ತಮ್ಮ ಹತ್ತಿರ ಬೇಡಿಕೊಳ್ಳುತ್ತೇವೆ.

ಶ್ರೀ ವಿಜಯಕುಮಾರ್ ಶೆಟ್ಟಿ (ಸುರತ್ಕಲ್): ಮಾನ್ಯ ಅಧ್ಯಕ್ಷರೆ, ಈ ಡೀಸೆಲ್ ಮೇಲಿನ ಮಾರಾಟ ತೆರಿಗೆ ರದ್ದುಗೊಳಿಸಿದ್ದನ್ನು ಮುಂದಿನ ಆರ್ಥಿಕ ವರ್ಷದವರೆಗೆ ಇನ್ನು 15,000 ಲೀಟರ್ ಹೆಚ್ಚಳ ಮಾಡಿದ್ದನ್ನು ರದ್ದುಗೊಳಿಸಬೇಕೆಂದು ನಾನು ವಿನಂತಿಸಿಕೊಳ್ಳುತ್ತೇನೆ. 3 ಜಿಲ್ಲೆಗಳಲ್ಲಿ ಒಟ್ಟು 70,000 ಕುಟುಂಬದ ಮೀನುಗಾರರು ಇವತ್ತು ಬೀದಿಗೆ ಇಳಿದಿದ್ದಾರೆ. ಆದ್ದರಿಂದ, ಈ ಒಂದು ಆದೇಶವನ್ನು ಇವತ್ತು ಮತ್ತು ನಾಳೆಯೊಳಗಾಗಿ ಆದಷ್ಟು ಜರೂರಾಗಿ ಮಾಡಬೇಕು. 3 ಜಿಲ್ಲೆಗಳಿಂದ ಕಳೆದ ಎರಡು ವರ್ಷಗಳಿಗಿಂತ ಮೊದಲು ಸುಮಾರು 100 ಕೋಟಿ ರೂಪಾಯಿಗಿಂತಲೂ ಹೆಚ್ಚಿಗೆ ನಾವು ಮೀನನ್ನು ಎಕ್ಸ್‌ಪೋರ್ಟ್ ಮಾಡುತ್ತಿದ್ದೇವೆ. ನಂತರ ಅಲ್ಲಿ ಬಂದಂತಹ ಅನೇಕ ಎಂಆರ್‌ಪಿಎಲ್, ಬಿಎಎಸ್‌ಎಫ್, ಕಾರ್ಖಾನೆಯಿಂದ ಅಲ್ಲಿರುವಂತಹ ಮೀನುಗಾರರಿಗೆ ಮೀನುಗಳು ಸಿಗದಂತಹ ಪರಿಸ್ಥಿತಿಯಾಗಿದೆ. ಈಗ ಕೇವಲ 15-20 ಕೋಟಿ ರೂಪಾಯಿ ಒಳಗಡೆ ಎಕ್ಸ್‌ಪೋರ್ಟ್ ಇರುವುದರಿಂದ ನಮ್ಮ ಜಿಲ್ಲೆಯ ಮೀನುಗಾರರು ಇವತ್ತು ಬಹಳ ಕಷ್ಟದಲ್ಲಿದ್ದಾರೆ. ಆದ್ದರಿಂದ, ಈ ಆದೇಶವನ್ನು ಇವತ್ತು ನಾಳೆಯೊಳಗಾಗಿ ಏನು

ಹಿಂದಿನ ಸರ್ಕಾರ ಆದೇಶವನ್ನು ಮಾಡಿದೆ ಅದನ್ನು ಅನುಷ್ಠಾನಗೊಳಿಸಬೇಕೆಂದು ನಾನು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಡಿ.ವಿ.ಸದಾನಂದಗೌಡ (ಪುತ್ತೂರು): ಮಾನ್ಯ ಅಧ್ಯಕ್ಷರೆ, ಇಲ್ಲಿಯವರೆಗೆ ಮಾತನಾಡಿದಂತಹ ಸದಸ್ಯರು ಆಡಳಿತ ಪಕ್ಷದವರಾಗಿರುವುದರಿಂದ ಅವರು ಬ್ರೀಫ್ ಆಗಿ ಹೇಳಿದ್ದಾರೆ. ನಾನು ವಿರೋಧಪಕ್ಷದಲ್ಲಿರುವುದರಿಂದ ಅವರಿಗೆ ಎಲ್ಲ ವಿಚಾರಗಳನ್ನು ಹೇಳಬೇಕಾಗುತ್ತದೆ.

ಅಧ್ಯಕ್ಷರು: ಯಾವುದೇ ಪಕ್ಷದಲ್ಲಿದ್ದರೂ ಸಮಾಚಾರವೊಂದೇ ತಾನೇ?

ಶ್ರೀ ಡಿ.ವಿ.ಸದಾನಂದಗೌಡ: ಇಡೀ ಕರಾವಳಿಯ ಬಗ್ಗೆ ಈ ಸರ್ಕಾರ ಭಾರಿ ತಾತ್ಸಾರವನ್ನು ಮೀನುಗಾರಿಕೆಯ ಬಗ್ಗೆ ಮಾಡಿದೆ. ಬಹುಶಃ 30,000 ಜನರಿಗೆ ನೇರ ಉದ್ಯೋಗ ಉಳಿದ 5 ರಿಂದ 6 ಸಾವಿರ ಜನರಿಗೆ ಬೇರೆ ರೀತಿಯ ಉದ್ಯೋಗ, ಸುಮಾರು 40,000 ಉದ್ಯೋಗ ಕೊಡುವಂತಹ ವ್ಯವಸ್ಥೆ ಇದ್ದರೂ ಇವತ್ತು ಈ ಸರ್ಕಾರ ಕಣ್ಣಿದ್ದು ಕುರುಡುರಂತೆ ವರ್ತನೆ ಮಾಡುತ್ತಿದೆ. ನಾನು ಒಂದು ವಿಚಾರವನ್ನು ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಸನ್ಮಾನ್ಯ ಜಯಪ್ರಕಾಶ್‌ಹೆಗಡೆಯವರು ಇಲ್ಲಿದ್ದಾರೆ; ಹಿಂದಿನ ಸರ್ಕಾರದಲ್ಲಿ ಅವರು ಮಂತ್ರಿಗಳಾಗಿದ್ದರು ನಾನು ಈ ಸಂದರ್ಭದಲ್ಲಿ ಅವರಿಗೆ ಅಭಿನಂದನೆಗಳನ್ನು ಸಲ್ಲಿಸಬೇಕಾಗುತ್ತದೆ. ಮೀನುಗಾರರಿಗೆ ಡೀಸೆಲ್ ಮೇಲಿನ ಮಾರಾಟ ತೆರಿಗೆಯನ್ನು ಪೂರ್ತಿ ಮನ್ನಾ ಮಾಡಬೇಕೆಂದು ಹಿಂದಿನ ಸರ್ಕಾರ ಮಾಡಿತ್ತು. ನಿನ್ನೆ ಅನ್‌ಸ್ಟಾರ್ಡ್ ಪ್ರಶ್ನೆಗೆ ಉತ್ತರ ಬಂದಿದೆ, ಡೀಸೆಲ್ ಮೇಲಿನ ಮಾರಾಟ ತೆರಿಗೆಯನ್ನು ಹಿಂದಿನ ಸರ್ಕಾರ ತೀರ್ಮಾನ ತೆಗೆದುಕೊಂಡಿದೆ; ಎಂದು ಇದರ ಬಗ್ಗೆ ಹೇಳಿದ್ದಾರೆ. ಇವತ್ತು ಸೋಮೇಶ್ವರದಿಂದ ಕಾರವಾರದವರೆಗೆ ಸುಮಾರು 200 ಕಿಲೋಮೀಟರ್ ಉದ್ದಕ್ಕೂ 2200 ಸಣ್ಣ ಯಾಂತ್ರಿಕ ನಾವೆಗಳು, 800 ಮಧ್ಯಮ ವರ್ಗದ ನಾವೆಗಳು, 325 ಪರ್ಶಿಯನ್ ಬೋಟುಗಳು 2000 ನಾಡ ದೋಣಿಗಳು ಮೀನುಗಾರಿಕೆ ಮಾಡುವಂತದ್ದನ್ನು ನಾವು ನೋಡುತ್ತಿದ್ದೇವೆ. ಇವತ್ತು ಮೀನುಗಾರಿಕೆಗೆ ಎಷ್ಟು ಕಷ್ಟವಾಗಿದೆ ಎನ್ನುವುದನ್ನು ನಾವು ಕೂಡ ಅರಿತುಕೊಳ್ಳಬೇಕಾಗಿದೆ. ಅದಕ್ಕಾಗಿ ನಾವು ಈ ಒತ್ತಡವನ್ನು ಮಾಡುತ್ತಿದ್ದೇವೆ, ಡೀಸೆಲ್ ಮೇಲಿನ ಬೆಲೆ ಒಂದು ಕಡೆ ಆದರೆ ಬೇರೆ ರಾಜ್ಯದಲ್ಲಿ ಇರುವುದಕ್ಕಿಂತ ಹೆಚ್ಚಿಗೆ ಬೆಲೆ ಈ ಭಾಗದಲ್ಲಿದೆ. ಕಳೆದವರ್ಷ ಮತ್ಸ್ಯಕ್ಷಾಮದಿಂದ ಮತ್ಸ್ಯಗಳು ಸಿಗುವ ಸಂದರ್ಭವಾಗಲಿಲ್ಲ. ಅದರಿಂದ ಅವರು ಇನ್ನು ಚೇತರಿಸಿಕೊಂಡಿರುವುದಿಲ್ಲ, ಆಳ ಸಮುದ್ರ ಮೀನುಗಾರಿಕೆಗೆ ವಿದೇಶಿಯರಿಗೆ ಪರವಾನಿಗಿಯನ್ನು ಕೊಟ್ಟರು. ಕಳೆದ ಸಾರಿ ಶ್ರೀ ವಾಜಪೇಯಿ ಸರ್ಕಾರ ಅಧಿಕಾರಕ್ಕೆ ಬಂದ ತಕ್ಷಣ ಕೇಂದ್ರ ಸರ್ಕಾರದಿಂದ ಅವರು ವಿದೇಶಿಯರಿಗೆ ಕೊಟ್ಟಿರುವ ಪರವಾನಿಗೆಯನ್ನು ರದ್ದು ಮಾಡಿದರು; ನಂತರ ಪುನಃ ಇಲ್ಲಿಯವರೆಗೆ ಮಾಡಬೇಕೆಂದು

ಮಾಡಿದ್ದರು.

ಶ್ರೀ ಯು.ಆರ್.ಸಭಾಪತಿ: ರದ್ದು ಮಾಡಲಿಲ್ಲ, ಸದನದಲ್ಲಿ ನೀವು ತಪ್ಪು ಮಾಹಿತಿಯನ್ನು ಕೊಡಬೇಡಿ.

ಶ್ರೀ ಡಿ.ವಿ.ಸದಾನಂದಗೌಡ: ರದ್ದು ಮಾಡಿದ್ದರು, ಅನಂತರ ರದ್ದು ಮಾಡುವ ಕೆಲಸವನ್ನು ಸರ್ಕಾರದವರು ಮಾಡಿದ್ದರು. ಸುಮಾರು 120 ಕಿಲೋ ಮೀಟರ್‌ನಂತರ ವಿದೇಶಿ ಕಂಪನಿಗಳು ಮಾಡಬೇಕೆನ್ನುವ ಆದೇಶವಿದ್ದರೂ ಕೂಡ ಅದನ್ನು ಮೀರಿ ಇವತ್ತು ಆ 120 ನಾಟಿಕಲ್ ಮೈಲಿನ ಒಳಗಡೆ ಇವತ್ತು ಬಂದು ಅವರು ಮಾಡುವುದರಿಂದ ಇವತ್ತು ಈ ಭಾಗದ ಮೀನುಗಾರರಿಗೆ ತುಂಬ ತೊಂದರೆಯಾಗಿದೆ. ಈ ಎಲ್ಲಾ ವ್ಯವಸ್ಥೆಗ ಡೀಸೆಲ್ ಮೇಲಿನ ಮಾರಾಟ ತೆರಿಗೆಯನ್ನು ಮಾಡಿರುವುದರಿಂದ ಗರಬಡಿದಂತಾಗಿದೆ. ಈಗಾಗಲೇ 30,000 ಲೀಟರ್ ಏನು ಕೊಟ್ಟಿದ್ದಾರೆ ಅದನ್ನು ಮಾರಾಟ ತೆರಿಗೆಯಿಂದ ಮನ್ನಾ ಮಾಡಿ ಅದನ್ನು ಉಪಯೋಗ ಮಾಡಿದರು. ಈಗ ಡೀಸೆಲ್ ಮುಗಿದಿದೆ, ಹಲವಾರು ದಿನಗಳಿಂದ ಮೀನುಗಾರಿಕೆ ರದ್ದಾಗಿದೆ. ನಿನ್ನೆಯಿಂದ ಜಿಲ್ಲಾಧಿಕಾರಿಗಳು ಕಛೇರಿ ಎದುರು ನಿರಂತರವಾಗಿ ಧರಣಿ ಸತ್ಯಾಗ್ರಹ ನಡೆಯುತ್ತಿದೆ. ಈ ವರ್ಷಕ್ಕೆ ಸುಮಾರು 15 ರಿಂದ 20 ಸಾವಿರ ಲೀಟರ್ ಡೀಸೆಲ್‌ಗೆ ಅವಶ್ಯಕತೆ ಇದೆ, ತಕ್ಷಣ ಮಾರ್ಚಿ - 31ರೊಳಗಡೆ ಕೆಲಸವನ್ನು ಮಾಡಿ 30,000 ಲೀಟರ್ ಡೀಸೆಲ್‌ನ್ನು ಹೆಚ್ಚಿಗೆ ಕೇಳುತ್ತಿದ್ದಾರೆ. ಅದಕ್ಕೆ ತಕ್ಷಣ ಮಾರಾಟ ತೆರಿಗೆಯನ್ನು ಮನ್ನಾ ಮಾಡಬೇಕು ಮುಂದಿನ ಬಜೆಟ್‌ನಲ್ಲಿ ಸುಮಾರು 60,000 ಲೀಟರ್ ಬೇಕಾದಂತಹ ಬಜೆಟ್ ವ್ಯವಸ್ಥೆಯನ್ನು ಕೂಡ ಸರ್ಕಾರ ಮಾಡಬೇಕು, ಈಗಾಗಲೇ ಡೀಸೆಲ್ ಲಭ್ಯತೆ ಇಲ್ಲದೇ ಇರುವುದರಿಂದ ಮೀನುಗಾರರಿಗೆ ತೊಂದರೆಯಾಗಿದೆ.

4.00 ಪಿಎಂ

ಶ್ರೀ ಯು.ಆರ್.ಸಭಾಪತಿ: ಸಂಪೂರ್ಣವಾಗಿ ಡೀಸೆಲ್ ಮೇಲಿನ ಮಾರಾಟ ತೆರಿಗೆಯನ್ನು ರದ್ದು ಮಾಡಬೇಕೆಂದು ನಾವು ಹೇಳುತ್ತಿದ್ದೇವೆ. ಇವರು 60,000 ಲೀಟರ್‌ಗೆ ಸೀಮಿತಗೊಳಿಸಬೇಕೆಂದು ಹೇಳುತ್ತಿದ್ದಾರೆ, ಇದು ಏನು?

ಶ್ರೀ ಡಿ.ವಿ.ಸದಾನಂದಗೌಡ: ನಾನು ಮಾನ್ಯ ಸಭಾಪತಿಯವರಿಗೆ ಖಡಾಖಂಡಿತವಾಗಿ ಹೇಳಬೇಕಾಗುತ್ತದೆ, ಅವರು ಹೇಳಿದರು ನಮ್ಮ ಸರ್ಕಾರದಲ್ಲಿರುವಂತಹ ಅಧಿಕಾರಿಗಳು ಈ ತೊಂದರೆಯನ್ನು ಮಾಡಿದ್ದಾರೆ. ಆಡಳಿತದಲ್ಲಿರತಕ್ಕಂತಹ ಅಧಿಕಾರಿಗಳ ಮೇಲೆ ಹಿಡಿತವಿಲ್ಲದಂತಹ ಈ ಸರ್ಕಾರ, ಅಂತಹ ಸರ್ಕಾರದಲ್ಲಿರುವಂತಹ ಈ ಶಾಸಕರು ನನ್ನ ಮಧ್ಯದಲ್ಲಿ ಹಸ್ತಕ್ಷೇಪ ಮಾಡುವುದೇಕೇ? ಅವರು ಮತ್ತೆ ಹೇಳಲಿ.

ಶ್ರೀ ಯು.ಆರ್.ಸಭಾಪತಿ: ಇದು ಸದನಕ್ಕೆ ಮಾಡಿದ ಅಪಚಾರವೆಂದು ನಾನು ಹೇಳಿದ್ದು, ಅಧಿಕಾರಿಗಳಿಂದ ಆಗಿರುವ ತಪ್ಪಿಗೆ ನೀವು ಯಾರನ್ನೋ ದೂರುತ್ತಿದ್ದೀರಿ ಅಷ್ಟೇ.

ಶ್ರೀ ಡಿ.ವಿ.ಸದಾನಂದಗೌಡ: ನಿಮ್ಮ ಅಧಿಕಾರಿಗಳನ್ನು ಹಿಡಿತದಲ್ಲಿಟ್ಟುಕೊಂಡು ಸರ್ಕಾರದಿಂದ ಆದ ಆಜ್ಞೆಯನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ಸಾಧ್ಯವಾಗದಿದ್ದರೆ, ನೀವು ಆ ಸ್ಥಾನವನ್ನು ಬಿಡಿ, ನೀವು ಏಕೆ ಅಲ್ಲಿ ಕುಳಿತುಕೊಂಡಿದ್ದೀರಿ, ಬಿಟ್ಟುಹೋದರೆ ಸಂತೋಷ.

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು): ಬಿಟ್ಟುಹೋಗಿಬಿಟ್ಟರೆ, ವಿಷಯ ಏನಿದೆ ಅದನ್ನು ಪ್ರಸ್ತಾಪ ಮಾಡಿ, ಸಂಬಂಧಪಡದೆ ಇರುವಂತಹ ವಿಚಾರವನ್ನು ಏಕೆ ಪ್ರಸ್ತಾಪ ಮಾಡುತ್ತೀರಿ?

(ಗೊಂದಲ)

ಶ್ರೀ ಡಿ.ವಿ.ಸದಾನಂದಗೌಡ: ಸ್ಥಾನ ಬಿಡಿ ಎಂದು ನಾನು ಹೇಳಿದ್ದು, ನಿಮ್ಮ ಸದಸ್ಯರು ಹೇಳಿದ ಮಾತಿಗೆ ಮಾತ್ರ ಹೇಳಿದ್ದೇನೆಯೇ ಹೊರತು ಬೇರೆ ಏನು ಅಲ್ಲ. ಏಕೆಂದರೆ, ಆಡಳಿತಲ್ಲಿರುವಂತಹ ಯಾವುದೇ ಒಂದು ಅಧಿಕಾರಾರೂಢ ಪಕ್ಷ ತನ್ನ ಆಡಳಿತದಲ್ಲಿರುವಂತಹ ಅಧಿಕಾರಿಗಳ ಮೇಲೆ ಹಿಡಿತವಿಲ್ಲದೆ ಅಧಿಕಾರಿಗಳು ಲಂಗು ಲಗಾಮು ಇಲ್ಲದೆ ಹೋಗುವಂತಿದ್ದರೆ ಅದು ಸರಿಯಲ್ಲ. ಅದಕ್ಕಾಗಿ ತಕ್ಷಣ ಇದಕ್ಕೆ ಸ್ಪಂದನೆ ಮಾಡಬೇಕು. ಹಿಂದೆ ಇದ್ದ ಸರ್ಕಾರದ ಮಾನ್ಯ ಜಯಪ್ರಕಾಶಹೆಗಡೆಯವರು ಏನು ಡೀಸಲ್ ಮೇಲಿನ ಮಾರಾಟ ತೆರಿಗೆಯನ್ನು ರದ್ದುಪಡಿಸಿದ್ದರು ಅದನ್ನೇ ಮುಂದುವರಿಸಿಕೊಂಡು ಹೋಗಬೇಕು. ತಕ್ಷಣವೇ ಡೀಸೆಲ್ ಕೊರತೆ ಏನಿದೆ ಅದನ್ನು ನಾಳೆಯಿಂದಲೇ ಒದಗಿಸುವಂತಹ ವ್ಯವಸ್ಥೆಯನ್ನು ಸರ್ಕಾರದ ವತಿಯಿಂದ ಮಾಡಬೇಕೆಂಬ ಆಗ್ರಹವನ್ನು ಈ ಸಂದರ್ಭದಲ್ಲಿ ಮಾಡುತ್ತಿದ್ದೇನೆ.

+ ಶ್ರೀ ಕೆ.ಜಯಪ್ರಕಾಶ್‌ಹೆಗಡೆ (ಬ್ರಹ್ಮಾವರ): ಮಾನ್ಯ ಅಧ್ಯಕ್ಷರೆ, ಈ ವಿಷಯಕ್ಕೆ ಬರುವ ಮುಂಚೆ ಒಂದು ಪ್ರಸ್ತಾಪವನ್ನು ಮಾಡುತ್ತಿದ್ದೇನೆ, ಮಾನ್ಯ ಸಭಾಪತಿಯವರು ಹಾಗೂ ವಸಂತ ಸಾಲಿಯಾನರವರು ಈ ಕಡೆ ಇದ್ದಾಗ ಹಿರಿಯ ಕಾಂಗ್ರೆಸ್ ಸದಸ್ಯರೂ ಕೂಡ ಪ್ರತಿದಿನ ಈ ವಿಷಯವಾಗಿ ಗಲಾಟೆಯನ್ನು ಮಾಡುತ್ತಿದ್ದರು. ಈಗ ಅವರ ಧ್ವನಿ ಏಕೆ ಕಡಿಮೆಯಾಯಿತು ಎಂದು ನಾನು ಕೇಳುವುದಕ್ಕೆ ಇಚ್ಚಿಪಡುತ್ತಿದ್ದೇನೆ. ಈ ಭಾಗದಲ್ಲಿದ್ದಾಗ ಅವರು ಪ್ರತಿದಿನ ಗಲಾಟೆಯನ್ನು ಮಾಡುತ್ತಿದ್ದರು, ಮೀನುಗಾರಿಕೆಯ ಹಿಡುವಳಿ ಕಡಿಮೆಯಾಗಿದೆ, ಮೀನುಗಾರರು ತೊಂದರೆಯಲ್ಲಿದ್ದಾರೆ, ಪರಿಹಾರ ಕೊಡಬೇಕೆಂದು ಒಂದು ಕಡೆಯಾದರೆ ಇನ್ನೊಂದು ಕಡೆ ಡೀಸೆಲ್ ಮೇಲಿನ ಕರವನ್ನು

ತೆಗೆಯಬೇಕೆಂದು ನಡೆಯುತ್ತಿತ್ತು. ನಾನು ನಿನ್ನೆ ಒಂದು ಪ್ರಶ್ನೆಯನ್ನು ಕೇಳಿದ್ದೆ, ಕಳೆದ ವರ್ಷಕ್ಕಿಂತ ಈ ವರ್ಷ ಮೀನುಗಾರಿಕೆ ಹಿಡುವಳಿ ಕಡಿಮೆಯಾಗಿದೆಯೇ ಅಥವಾ ಹೆಚ್ಚಾಗಿದೆಯೇ ಎಂದು ಪ್ರಶ್ನೆ ಕೇಳಿದ್ದಕ್ಕೆ ಕಳೆದ ವರ್ಷಕ್ಕಿಂತ ಹಿಡುವಳಿ ಕಡಿಮೆಯಾಗಿದೆ ಎಂದು ಉತ್ತರದಲ್ಲಿ ಅಂಕಿ ಅಂಶವನ್ನು ಕೊಟ್ಟಿದ್ದಾರೆ. ತಮ್ಮ ಮುಖೇನ ಸರ್ಕಾರವನ್ನು ನಾನು ಕೇಳುವುದಕ್ಕೆ ಇಚ್ಛಿಪಡುತ್ತೇನೆ, ಇವರು ಪರಿಹಾರವನ್ನು ಕೊಡುತ್ತಾರೆಯೇ? ಇದರಿಂದ ಇದೆಲ್ಲಾ ಸಮಸ್ಯೆ ಉದ್ಭವಿಸಿದ್ದು, ಈ ಮತ್ಸ್ಯದ ಉದ್ಯಮ ಕ್ಷೀಣಿಸುತ್ತಾ ಬಂದಿರುವುದರಿಂದ ಈ ಎಲ್ಲಾ ಸಮಸ್ಯೆಗಳು ಉದ್ಭವವಾಗಿವೆ. ಕಳೆದವರ್ಷ ನಮ್ಮ ಸರ್ಕಾರದ ವಿತ್ತಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರ ಜೊತೆ ಮಾತನಾಡಿದಾಗ ಅವರು ಹಿಂದುಳಿದ ವರ್ಗದವರಿಗೆ ಒಂದು ಸಹಾಯವನ್ನು ಮಾಡಬೇಕೆನ್ನುವ ಉದ್ದೇಶದಿಂದ ಡೀಸೆಲ್ ಮೇಲಿನ ಸಂಪೂರ್ಣ ಕರವನ್ನು ವಿನಾಯಿತಿ ಮಾಡಿದ್ದರು. ಅದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ನನಗೆ ಉತ್ತರವನ್ನು ಕೊಟ್ಟಿದ್ದಾರೆ. "Fishing requisites of all kinds excepting mechanical boats, but including ice, diesel, etc., required by fishermen will be exempt from tax." ಅಂದಿನ ವಿತ್ತ ಸಚಿವರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ, ಇವತ್ತು ಕೂಡ ಉತ್ತರದಲ್ಲಿ ಇವರು ನಮೂದಿಸಿದ್ದಾರೆ. ಆದರೆ ಕೊನೆಯಲ್ಲಿ ಹೇಳುತ್ತಾರೆ 'Such subsidy scheme has to be implemented by the concerned administrative department.' ಮೀನುಗಾರಿಕೆ ಇಲಾಖೆಯವರು ಕೊಡಬೇಕಾಗುತ್ತದೆ, ಸೇಲ್ಸ್ ಟ್ಯಾಕ್ಸ್ ಎಗ್ಜಂಪಷನ್ ಕೊಡುವುದಕ್ಕಾಗುವುದಿಲ್ಲವೆಂದು ಉತ್ತರದಲ್ಲಿ ಕೊಟ್ಟಿದ್ದಾರೆ. ಇದನ್ನು ಮೀನುಗಾರಿಕೆಯ ಇಲಾಖೆಯಿಂದ ಕೊಡಬೇಕಾದರೆ ಅವರಲ್ಲಿ ಬಜೆಟ್‌ನಲ್ಲಿರುವ ಹಣ ಸಾಕಾಗುವುದಿಲ್ಲ ನನಗೆ ಇದರ ಬಗ್ಗೆ ಗೊತ್ತಿದೆ, ನಾನು ಕೂಡ ಮೀನುಗಾರಿಕೆ ಸಚಿವನಾಗಿದ್ದೆ, ಅದರಲ್ಲಿ ಎಷ್ಟು ಅಲೋಕೇಷನ್ ಇದೆ, ಇನ್ನು ಮುಂದೆ ಎಷ್ಟು ಅಲೋಕೇಷನ್ ಕೊಡುತ್ತಾರೆ ಅದರ ಮೇಲೆ ಎಷ್ಟು ಹಣವನ್ನು ಸಬ್ಸಿಡಿಗೆ ತೆಗೆದಿಡಬೇಕಾಗುತ್ತದೆ ಎಂಬುದನ್ನು ಸ್ವತಃ ನಾನು ಕಂಡಿರುತ್ತೇನೆ. ಆದ್ದರಿಂದ ಈ ಸಬ್ಸಿಡಿಯನ್ನು ಇಲಾಖೆಯಿಂದ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಮಾನ್ಯ ಮೀನುಗಾರಿಕೆ ಸಚಿವರು ಇಲ್ಲಿಯೇ ಇದ್ದಾರೆ ಅವರು ಇದರ ಬಗ್ಗೆ ಮಾಹಿತಿಯನ್ನು ಕೊಡಬೇಕಾಗುತ್ತದೆ. ಇನ್ನೊಂದು ಮಾತನ್ನು ಹೇಳುತ್ತಾರೆ, ಈ ಸೇಲ್ಸ್‌ಟ್ಯಾಕ್ಸ್ ಎಗ್ಜಂಪಷನ್ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲವೆಂದು ಉತ್ತರದಲ್ಲಿ ಹೇಳಿದ್ದಾರೆ. ಹಾಗಾದರೆ ಹಿಂದಿನ ಸರ್ಕಾರ ಕೊಡಲಿಕ್ಕೆ ಹೇಗೆ ಸಾಧ್ಯವಾಯಿತು ಎರಡೂ ರೂಪಾಯಿವರೆಗೆ ಒಂದು ಲೀಟರ್‌ಗೆ ಎಗ್ಜಂಪಷನ್‌ನ್ನು ಕೊಟ್ಟ ಕೆಲವೇ ದಿನಗಳಲ್ಲಿ ಡೀಸೆಲ್ ಬೆಲೆ ನಾಲ್ಕು ರೂಪಾಯಿಗಳಷ್ಟು ಜಾಸ್ತಿಯಾಯಿತು. ಇದರ ಬಗ್ಗೆ ಹಿಂದಿನ ಸರ್ಕಾರಕ್ಕೆ ಕಾಳಜಿ ಇಲ್ಲವೇ? ಇವರು ಹಿಂದೆ ವಿರೋಧಪಕ್ಷದಲ್ಲಿದ್ದಾಗ ಮಾತ್ರ ಆ

ಮೀನುಗಾರರ ಬಗ್ಗೆ ಕಾಳಜಿಯನ್ನು ತೋರಿಸುವಂಥದ್ದು ಆಗಿತ್ತು. ಇಂದು ಈ ಮೀನುಗಾರರ ಬಗ್ಗೆ ಇವರಿಗೆ ಕಳಕಳಿ ಇದೆಯೇ ಎಂದು ನಾನು ಕೇಳುತ್ತೇನೆ. ಮೀನುಗಾರರ ಪರವಾಗಿ ಸಭಾಪತಿಯವರು ಹಾಗೂ ಶ್ರೀ ವಸಂತಸಾಲಿಯಾನರವರು ಇದಕ್ಕಿಂತ ಹೆಚ್ಚಿಗೆ ಮಾತನಾಡುತ್ತಾರೆಂದು ತಿಳಿದುಕೊಂಡಿದ್ದೆ. ಏಕೆಂದರೆ ವಸಂತಸಾಲಿಯಾನರವರು ಮೀನುಗಾರಿಕಾ ಸಚಿವರಾಗಿದ್ದರು, ಸಭಾಪತಿಯವರು ದಿನನಿತ್ಯ ಅದರ ಬಗ್ಗೆ ಗಲಾಟೆಯನ್ನು ಮಾಡುತ್ತಿದ್ದರು. ಕೇವಲ ವಿರೋಧಪಕ್ಷದಲ್ಲಿದ್ದಾಗ ಮಾತ್ರ ವಿರೋಧ ಮಾಡುವುದಿಲ್ಲ. ನಾನು ಅಥವಾ ನಮ್ಮ ಸರ್ಕಾರ ತಪ್ಪು ಮಾಡಿದ್ದರೆ ತಪ್ಪು ಎಂದು ಹೇಳಿದ್ದೇನೆ ಇವತ್ತು ಕೂಡ ನಮ್ಮ ಸರ್ಕಾರ ಏನು ತಪ್ಪು ಮಾಡಿದೆ ಎನ್ನುವಂತದ್ದನ್ನು ಹೇಳುತ್ತೇನೆ. ಆದ್ದರಿಂದ ದಯವಿಟ್ಟು ನೀವು ಹೆಚ್ಚಿನ ಒತ್ತಡವನ್ನು ಹಾಕಬೇಕು ಮಾನ್ಯ ಮೀನುಗಾರಿಕಾಸಚಿವರು ಕೇಂದ್ರಸರ್ಕಾರದಿಂದ ಬರಬೇಕಾದಂತಹ ಮ್ಯಾಚಿಂಗ್ ಗ್ರಾಂಟನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು 2 ರೂಪಾಯಿಗಳ ಸಬ್ಸಿಡಿಯನ್ನು ನಾವು ಕೊಟ್ಟಿದ್ದೇವೆ. ನನ್ನ ಹೇಳಿಕೆಯನ್ನು ಶ್ರೀ ಯೋಗೀಶ್ ಭಟ್‌ರವರ ಪ್ರಶ್ನೆಗೆ ಶೂನ್ಯವೇಳೆಯಲ್ಲಿ ಉತ್ತರವನ್ನು ಕೊಟ್ಟಾಗ ಈ ರೀತಿಯಾಗಿ ಹೇಳಿದ್ದೇನೆ. 30,000 ಲೀಟರ್ ಎಂದು ಪತ್ರಿಕೆಯಲ್ಲಿ ಬಂದಿದೆ, ತಾವು ಇದರ ಬಗ್ಗೆ ಕ್ಲಾರಿಫೈ ಮಾಡಬೇಕೆಂದು ಕೇಳಿದ್ದಕ್ಕೆ ಇದರ ಬಗ್ಗೆ ಉತ್ತರ ಕೊಡುವಾಗ ನಾನು ನಿನ್ನೆ ಪಿತ್ತ ಸಚಿವರ ಜೊತೆ ಚರ್ಚೆ ಮಾಡಿದ್ದೇನೆ. ಆಗ ಅವರು 30,000 ಕಿಲೋ ಲೀಟರ್ ಅಷ್ಟೇ ಅಲ್ಲ ಮೀನುಗಾರರು ಉಪಯೋಗ ಮಾಡುವ ಎಲ್ಲ ಡೀಸೆಲ್‌ಗೆ ಪೂರ್ಣವಾಗಿ ಮಾರಾಟ ತೆರಿಗೆಯನ್ನು ವಿನಾಯಿತಿ ಮಾಡುವುದಾಗಿ ಹೇಳಿದ್ದಾರೆ. ಅನಂತರ ಉಡುಪಿಗೆ ಬಂದಾಗ ಮೀನುಗಾರರ ಸಭೆಯಲ್ಲಿ ಕೂಡ ಇದೇ ಮಾತನ್ನು ಅವರ ಮುಂದೆ ಹೇಳಿದರು. ಅದರ ಬಗ್ಗೆ ತಮಗೆ ಬೇಕಾದ ಮಾಹಿತಿಯನ್ನು ಕೊಡುವುದಕ್ಕೆ ಇಚ್ಚಿಪಡುತ್ತೇನೆ. ಆದ್ದರಿಂದ ಈ ಸರ್ಕಾರದವರು ಈ ಸದನದಲ್ಲಿ ಉತ್ತರವನ್ನು ಹೇಳಬೇಕಾಗುತ್ತದೆ. ಅವರು ಸಂಪೂರ್ಣವಾಗಿ ವಿನಾಯಿತಿಯನ್ನು ಕೊಡುತ್ತಾರೋ ಅಥವಾ ಲಿಮಿಟ್ ಏನಾದರೂ ಮಾಡುತ್ತಾರೋ ಎನ್ನುವುದರ ಬಗ್ಗೆ ಹೇಳಬೇಕು. ಲಿಮಿಟ್ ಮಾಡಿದರೆ ಇವತ್ತಿನದಿವಸ ಮೀನುಗಾರಿಕಾ ಹಿಡುವಳಿ ಕಡಿಮೆಯಾಗುತ್ತಾ ಬರುವಾಗ ಈ ಹಂತದಲ್ಲಿ ಖಂಡಿತವಾಗಿ ಅವರಿಗೆ ಅದು ಪೂರೈಕೆಯಾಗುವುದಿಲ್ಲ. ಆದ್ದರಿಂದ ಸಂಪೂರ್ಣವಾಗಿ ಮೀನುಗಾರರಿಗೆ ಕರ ರಿಯಾಯಿತಿಯನ್ನು ಕೊಟ್ಟು ಮೀನುಗಾರರ ಬದುಕನ್ನು ಸ್ವಲ್ಪ ಸುಧಾರಿಸಲಿಕ್ಕೆ ಸಾಧ್ಯವಾಗುವಂತೆ ಮಾಡಬೇಕು. ನಾನು ಅವರ ಹತ್ತಿರ ಹೆಚ್ಚಿಗೆ ಏನು ಕೇಳುತ್ತಿಲ್ಲ, ನಮ್ಮ ಸರ್ಕಾರ ಏನೇನು ಕೆಲಸಗಳನ್ನು ಮಾಡಿದೆ ಅದನ್ನು ಮುಂದುವರಿಸಿಕೊಂಡು ಹೋಗಬೇಕೆಂದು ಹೇಳುತ್ತೇನೆ. ಅವರಿಗೆ ಹೊಸ ಕಾರ್ಯಕ್ರಮಗಳನ್ನು ಹಾಕಿಕೊಳ್ಳುವುದಕ್ಕಾಗುವುದಿಲ್ಲ. ಇದು ನಮಗೆ ಗೊತ್ತಿದೆ, ಏಕೆಂದರೆ ಮೊನ್ನೆ ದಿನ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದಾರೆ. 'It has reached

saturation. But, the problem of them has not been solved. ಅದನ್ನು ನಾವು ಅರ್ಥಮಾಡಿಕೊಳ್ಳಬೇಕಾಗುತ್ತದೆ. ಆದ್ದರಿಂದ ಅವರ ಸಮಸ್ಯೆಯನ್ನು ಪರಿಹಾರ ಮಾಡುವುದಕ್ಕೆ ಡೀಸೆಲ್ ಮೇಲಿನ ಕರ ವಿನಾಯಿತಿಯ ಜೊತೆಗೆ ಇನ್ನು ಹಲವು ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆಂದು ತಮ್ಮ ಮುಖೇನ ಅವರ ಪತ್ತಿರ ವಿನಂತಿಯನ್ನು ಮಾಡಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಎನ್.ಯೋಗಿಶ್ ಭಟ್ (ಮಂಗಳೂರು): ಮಾನ್ಯ ಅಧ್ಯಕ್ಷರೆ, ಇಲ್ಲಿ ಮೂಲಭೂತವಾದ ಪ್ರಶ್ನೆ ಏನೆಂದರೆ, ಬಜೆಟ್‌ನಲ್ಲಿ ಯಾವುದು ಪ್ರಸ್ತಾವನೆ ಬಂದಿದೆ ಅದಕ್ಕೆ ಅದರದ್ದೇ ಆದ ಪಾವಿತ್ರತೆ ಮತ್ತು ಬದ್ಧತೆ ಇರುತ್ತದೆ; ಅದನ್ನು ಉಲ್ಲಂಘಿಸುವ ಕಾರ್ಯವನ್ನು ಅಧಿಕಾರವರ್ಗ ಇಲ್ಲಿ ಮಾಡಿದೆ ಎಂಬುದು ಸ್ಪಷ್ಟವಾಗಿ ಇಲ್ಲಿ ಕಾಣುತ್ತಿದೆ. ಇಲ್ಲಿ ಈ ತರಹವಾಗಿ ಕ್ಲಿಯರ್ ಆಗಿ ಕೊಟ್ಟಿದ್ದಾರೆ, "Fishing requisites of all kinds excepting mechanical boats, but including ice, diesel, etc., required by fishermen will be exempt from tax." ಎಂದು ಹೇಳುವಂಥದ್ದು ಸ್ಪಷ್ಟವಾಗಿ ಉಲ್ಲೇಖ ಮಾಡಿದಾಗ ಅದನ್ನು 30,000 ಕಿಲೋಲೀಟರ್ ಎಂದು ಹೇಳಿಕೊಂಡು ಯಾವಾಗ ಮಾಡಿದರು, ಇದಕ್ಕೆ ಯಾರು ಆಜ್ಞೆ ಕೊಟ್ಟಿದ್ದರೂ ಇದರ ಬಗ್ಗೆ ಸ್ಪಷ್ಟವಾದ ವಿವರಣೆ ನನಗೆ ಬೇಕು. ಇದಕ್ಕೋಸ್ಕರ ನಾನು 21ನೇ ಅಧ್ಯಾಯದ ರೂಲ್ 191 (ಎ) ಮತ್ತು ರೂಲ್ 192ರಂತೆ ನಾನು ಹಕ್ಕುಚ್ಯುತಿಗೆ ತಮ್ಮಲ್ಲಿ ಅವಕಾಶವನ್ನು ಕೇಳಿದ್ದೇನೆ. ಇವತ್ತು ಅದಕ್ಕೆ ಸಮಯಾವಕಾಶವಿಲ್ಲ, ತಾವು ಅದನ್ನು ಹಕ್ಕುಚ್ಯುತಿಯಾಗಿ ತೆಗೆದುಕೊಂಡು ಮುಂದೆ ಅದಕ್ಕೆ ಪರಿಹಾರವನ್ನು ಕೊಡುವುದಿದ್ದರೆ ನಾನು ಏನು ಮಾತನಾಡುವುದಕ್ಕೆ ಆಗುವುದಿಲ್ಲ. ಆದರೆ ಇದನ್ನು ಹಕ್ಕುಚ್ಯುತಿಯಾಗಿ ಪರಿಗಣಿಸಿ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರೆ, ಖಂಡಿತವಾಗಿ ಮುಂದೆ ಇಂಥ ತಪ್ಪುಗಳನ್ನು ಮಾಡಲಾರರು ಎಂಬ ವಿಶ್ವಾಸಮತ ನನಗಿದೆ. ಯಾವುದೇ ಬಜೆಟ್ ಸ್ಯಾಂಕ್ಷನ್ ಆಗುವುದಕ್ಕೆ ಮುಂಚೆ, ಇವರು ಏನು ಮಾಡುತ್ತಾರೆಂದರೆ, ಮೀನುಗಾರಿಕೆ ಇಲಾಖೆಯಿಂದ ರಿಕ್ವಿಜಿಷನ್‌ನ್ನು ತರಿಸುತ್ತಾರೆ. ಮೀನುಗಾರಿಕೆ ಇಲಾಖೆಯವರು ಇವರಿಗೆ ಏನು ರಿಪೋರ್ಟ್‌ನ್ನು ಕೊಟ್ಟಿದ್ದಾರೆ. 55,000 ಕಿಲೋಲೀಟರ್ ಡೀಸೆಲ್ ಬೇಕಾಗುತ್ತದೆಂದು ಒಂದು ರಿಪೋರ್ಟ್‌ನ್ನು ಕೊಟ್ಟಿದ್ದಾರೆ. ಅಷ್ಟಿದ್ದರೂ ಕೂಡ 30,000 ಕಿಲೋ ಲೀಟರ್‌ನಲ್ಲಿ ಇಲ್ಲಿ ಹೇಗೆ ಬಂತು ಎಂದು ಹೇಳುವಂತದ್ದು ನನ್ನ ಪ್ರಶ್ನೆಯಾಗಿದೆ, 3,310 ಬೋಟುಗಳು 3 ಜಿಲ್ಲೆಯಲ್ಲಿವೆ. perseine, deep sea, small mechanised boats, ಅಲ್ಲಿ 70,000 ಜನರು ದುಡಿಯುತ್ತಿದ್ದಾರೆ ಅಪರೋಕ್ಷವಾಗಿ 2 ಲಕ್ಷ ಮೀನುಗಾರಿಗೆ ಉದ್ಯೋಗ ಸಿಗುತ್ತಿದೆ. 100 ಕೋಟಿ ರೂಪಾಯಿಗಳು ರಫ್ತೋದ್ಯಮವಲ್ಲ, 100 ಕೋಟಿ ರೂಪಾಯಿಗಳು ವಿದೇಶಿ ವಿನಿಮಯದಿಂದ ನಮ್ಮ ರಾಜ್ಯಕ್ಕೆ ಲಾಭವಾಗುತ್ತಿದೆ. ಇಷ್ಟೆಲ್ಲಾ

ಹಿನ್ನೆಲೆ ಇರುವಾಗ ಇದನ್ನು ಉಲ್ಲಂಘಿಸಿ ಕೊಟ್ಟಿರುವಂತದ್ದು 30 ರಿಂದ 35 ಸಾವಿರ ಕಿಲೋಲೀಟರ್ ಎಂದು ಹೇಳುತ್ತಿರುವುದು ಸರಿಯಲ್ಲ. ನಾನು ಮೊನ್ನೆ ತಾನೇ ಕಾಲಿಂಗ್ ಅಟೆನ್‌ಷನ್-351ರ ಮೂಲಕ ಕೇಳಿದ್ದೇನೆ; 40 ಸಾವಿರ ಕಿಲೋಲೀಟರ್ ಎಂದು ಈಗಾಗಲೇ ಅವರು ನನಗೆ ಉತ್ತರವನ್ನು ಕೊಟ್ಟಿದ್ದಾರೆ. 40 ಸಾವಿರ ಕಿಲೋ ಲೀಟರ್‌ಗೆ ಏರಿಸಲಾಗಿ 5 ಸಾವಿರ ಕಿಲೋಲೀಟರ್‌ನ್ನು ಕೊಡುತ್ತೇವೆಂದು ಹೇಳಿದ್ದಾರೆ. ಆವರೇಜ್ 7 ತಿಂಗಳಲ್ಲಿ 3 ತಿಂಗಳುಗಳ ಮಳೆಗಾಲದಲ್ಲಿ ಮೀನುಗಾರಿಕೆಗೆ ರಜೆಯಿರುತ್ತದೆ, 7 ತಿಂಗಳಲ್ಲಿ ಆವರೇಜ್ ಎಷ್ಟು ಎಂದು ಹೇಳಿದರೆ 55 ಕಿಲೋಲೀಟರ್ ಎಂದು ಇಟ್ಟುಕೊಂಡರೂ ಕೂಡ ಕನಿಷ್ಠ ತಿಂಗಳಿಗೆ 8 ಸಾವಿರ ಕಿಲೋಲೀಟರ್ ಬೇಕಾಗುತ್ತದೆ. ಅಷ್ಟಿದ್ದರೂ ಅವರು ಕೊಡದೆ ಇರುವುದರಿಂದ, ತಕ್ಷಣ 15 ಸಾವಿರ ಕಿಲೋಲೀಟರ್ ಡೀಸೆಲ್‌ನ್ನು ಮಾರಾಟತೆರಿಗೆ ರಹಿತವಾಗಿ ತಾವು ಅದನ್ನು ಬಿಡುಗಡೆ ಮಾಡಬೇಕೆಂದು ತಮ್ಮಲ್ಲಿ ವಿನಂತಿಯನ್ನು ಮಾಡುತ್ತಿದ್ದೇನೆ. ಇವತ್ತು 4 ಆಯಿಲ್ ಕಂಪನಿಗಳು ಇವೆ. ಈಗಾಗಲೇ ಪರ್ಚೇಸ್ ಮಾಡಿದಂತಹ ಆಯಿಲ್‌ನ ಮೇಲೆ ಒಂದೊಂದು ಕೋ-ಆಪರೇಟೀವ್ ಸೊಸೈಟಿಗೆ 11 ಲಕ್ಷ ರೂಪಾಯಿಗಳನ್ನು ವಸೂಲಿ ಮಾಡುವುದಕ್ಕೆ ನೋಟೀಸ್ ಹೋಗಿದೆ. ಅವರ ವರ್ಕಿಂಗ್ ಕ್ಯಾಪಿಟಲ್ ಎಷ್ಟಿದೆ ಎಂದು ಹೇಳಿದರೆ ಆರೇಳು ಲಕ್ಷ? ಬಹುಶಃ ಅದನ್ನು ಮಾಡಿದರೆ 21 ಕೋಆಪರೇಟಿವ್ ಸೊಸೈಟಿಗಳು ದಿವಾಳಿಯಾಗುತ್ತವೆ. ಈ ನಿಟ್ಟಿನಲ್ಲಿ ತಕ್ಷಣ ಇದಕ್ಕೆ ಸಂಬಂಧಪಟ್ಟ ಎಕ್ಸಮ್‌ಷನ್ ಅನ್ನು ಕೊಡುವುದು ಅಷ್ಟೆ ಅಲ್ಲ 15ಸಾವಿರ ಕಿಲೋಲೀಟರ್ ಡೀಸಲ್ ಅನ್ನು ಸಹ ಬಿಡುಗಡೆ ಮಾಡಬೇಕೆಂದು ಒತ್ತಾಯ ಮಾಡುತ್ತಿದ್ದೇನೆ. 16ನೇ ತಾರೀಖಿನಿಂದ ಇವತ್ತು 3,300 ಬೋಟ್‌ಗಳು ಸ್ಥಗಿತಗೊಂಡಿವೆ. ಮೂರು ಜಿಲ್ಲೆಗಳಲ್ಲಿ ಧರಣಿ ಸತ್ಯಾಗ್ರಹ ಮಾಡುತ್ತಿದ್ದಾರೆ. ಬಹುಶಃ ಅದರ ಫಲಶೃತಿಯಾಗಿ ಇಡೀ ಜಿಲ್ಲೆಯಲ್ಲಿ ಹಾಹಾಕಾರ ಎದ್ದಿದೆ. ಈ ನಿಟ್ಟಿನಲ್ಲಿ ತಕ್ಷಣ ನಾನು ಹೇಳುವಂತಹದ್ದು ನಮಗೆ ಯಾವುದೇ ಪರಿಹಾರಧನವನ್ನು ನಾನು ಕೇಳುತ್ತಿಲ್ಲ. ತಕ್ಷಣಕ್ಕೆ 15ಸಾವಿರ ಕಿಲೋಲೀಟರ್ ಡೀಸಲನ್ನು ಮಾರಾಟ ತೆರಿಗೆ ರಹಿತವಾಗಿ ಬಿಡುಗಡೆ ಮಾಡುವಂತಹ ಘೋಷಣೆಯನ್ನು ಮಾನ್ಯ ಸಚಿವರು ಮಾಡಬೇಕೆಂದು ನಾನು ವಿನಂತಿ ಮಾಡುತ್ತೇನೆ. ಮುಂದಿನ ಬಜೆಟ್‌ನಲ್ಲಿ ಸಹ ಯಾವುದನ್ನು ಕೊಡುತ್ತೇವೆಂದು ಹೇಳುತ್ತೀರಿ ಅದನ್ನು ತೆರಿಗೆ ರಹಿತವಾಗಿ ಕೊಡಬೇಕು. ಯಾವುದೇ ಲಿಮಿಟ್‌ನ್ನು ಹಾಕಬಾರದೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛಿಪಡುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೆ, ಉತ್ತರ ಕನ್ನಡ ಜಿಲ್ಲೆ ಮತ್ತು ದಕ್ಷಿಣ ಕನ್ನಡ ಜಿಲ್ಲೆ ಎರಡೇ ಜಿಲ್ಲೆಯಲ್ಲಿ ಮೀನುಗಾರಿಕೆ ಇರುವುದು. ಹಾಗಾಗಿ ನಮ್ಮದೇನು ಅಂದರೆ ಉತ್ತರ ಕನ್ನಡ ಜಿಲ್ಲೆಯ ಮೀನುಗಾರಿಕೆಯಲ್ಲಿ ಇದೇರೀತಿಯ ಕಷ್ಟವನ್ನು ಅನುಭವಿಸುತ್ತಿದ್ದಾರೆ. ನಾನು ಇದರ ಬಗ್ಗೆ ಬರೆದುಕೊಟ್ಟಿದ್ದೇನೆ. ಉತ್ತರ

ಕನ್ನಡ ಜಿಲ್ಲೆಯ ಮೀನುಗಾರರಿಗೂ ದಕ್ಷಿಣ ಕನ್ನಡ ಜಿಲ್ಲೆಯ ಮೀನುಗಾರರಿಗೂ ಒಂದೇ ಸಮಸ್ಯೆಯಿದೆ. ಡೀಸೆಲ್ ಮೇಲಿರತಕ್ಕ ತೆರಿಗೆಯನ್ನು ರದ್ದುಪಡಿಸಿ ತಕ್ಷಣ ಅವರಿಗೆ ಡೀಸಲ್‌ನ ಖೋಟಾವನ್ನು ಹೆಚ್ಚು ಮಾಡಿ ಕೊಡದೇಹೋದರೆ, ಮಾನ್ಯ ಸಚಿವರು ನಮ್ಮ ಕ್ಷೇತ್ರಕ್ಕೆ ಬಂದಿದ್ದೀರಿ ನಿಮಗೆ ಗೊತ್ತಿದೆ. ಮೀನುಗಾರರು ಎಷ್ಟೆಷ್ಟು ಸಮಸ್ಯೆಯನ್ನು ಅನುಭವಿಸುತ್ತಿದ್ದಾರೆಂದು. ಅವರಿಗೆ ಮನೆಗಳು ಇಲ್ಲ ಅವರಿಗೆ ಮಾರಾಟದ ವ್ಯವಸ್ಥೆಯಿಲ್ಲ. ಅವರಿಗೆ ಯಾವುದೇ ರೀತಿಯ ಗ್ಯಾರಂಟಿಯಿಲ್ಲ. ಅವರಿಗೆ ಅನೇಕ ಸಮಸ್ಯೆಗಳಿವೆ. ಅವರ ರಸ್ತೆಗಳ ಪರಿಸ್ಥಿತಿ ನಿಮಗೆ ಗೊತ್ತಿದೆ. ಏನೇನು ಆಗಿದೆ ಏನೇನು ಕಷ್ಟ ಅನುಭವಿಸುತ್ತಿದ್ದಾರೆ, ಆ ಕಷ್ಟಗಳ ಮೇಲೆ ಮತ್ತೆ ನಾವು ಡೀಸಲ್ ಮೇಲೆ ತೆರಿಗೆಯ ರೂಪದಲ್ಲಿ ಈ ಒಂದು ಹೊರೆಯನ್ನು ಹಾಕಿದರೆ ಅವರು ಇನ್ನಷ್ಟು ಕಷ್ಟವನ್ನು ಅನುಭವಿಸುವಂತಹ, ಗಾಯದ ಮೇಲೆ ಬರೆಯನ್ನು ಎಳೆದಂತಾಗುತ್ತದೆ. ಆದ್ದರಿಂದ ದಯವಿಟ್ಟು ಸರ್ಕಾರ ಹಿಂದೆ ಯಾವರೀತಿಯ ಒಂದು ಭರವಸೆಯನ್ನು ಕೊಟ್ಟಿತ್ತೋ ಅದನ್ನು 30 ಸಾವಿರ ಕಿಲೋಲೀಟರ್‌ಗೆ ಸೀಮಿತಗೊಳಿಸದೆ ಮಾರ್ಚಿ ತಿಂಗಳ ಕೊನೆಯಲ್ಲಿ ಈ ತಿಂಗಳ ಕೊನೆಯಲ್ಲಿ ತಕ್ಷಣದಲ್ಲೆ 15 ಕಿಲೋಲೀಟರ್ ನಿಂದ 20 ಸಾವಿರ ಕಿಲೋಲೀಟರ್ ಡೀಸಲ್‌ನ್ನು ಬಿಡುಗಡೆ ಮಾಡಲೇಬೇಕಾದ ಅಗತ್ಯವಿದೆ. ಉತ್ತರ ಕನ್ನಡ ಜಿಲ್ಲೆ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಮೀನುಗಾರರಿಗೆ ಅನುಕೂಲವಾಗುವ ಹಿನ್ನೆಲೆಯಲ್ಲಿ ಅವರಿಗಿರುವ ಅನೇಕ ಕಷ್ಟಗಳ ಜೊತೆಯಲ್ಲಿ ಇದು ದೂರವಾಗುವ ಹಿನ್ನೆಲೆಯಲ್ಲಿ ಈ ಒಂದು ಸಬ್ಸಿಡಿಯನ್ನು ಡೀಸಲ್‌ಗೆ ಕೊಡಬೇಕು. ತಕ್ಷಣದಲ್ಲಿ ಖೋಟಾವನ್ನು ರಿಲೀಸ್ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

+ ಶ್ರೀ ಬಿ.ರಮಾನಾಥ ರೈ (ಮೀನುಗಾರಿಕೆ ಮತ್ತು ಬಂದರು ಖಾತಾ ಸಚಿವರು): ಮಾನ್ಯ ಅಧ್ಯಕ್ಷರೆ, ಈ ಸದನ ಗೌರವಾನ್ವಿತ ಸದಸ್ಯರಾದ ಮಾನ್ಯ ಸಭಾಪತಿಯವರು ವಸಂತ ಸಾಲಿಯಾನವರು, ವಿಜಯಕುಮಾರ್‌ಶಟ್ಟಿಯವರು, ಸದಾನಂದಗೌಡರು, ಜಯಪ್ರಕಾಶ್‌ಹೆಗಡೆಯವರು, ಯೋಗೀಶ್‌ಭಟ್ ಮತ್ತು ವಿಶ್ವೇಶ್ವರ ಹೆಗಡೆಯವರು ಕರಾವಳಿ ಪ್ರದೇಶದ ಮೀನುಗಾರರ, ಫಿಶಿಂಗ್ ಬೋಟ್‌ಗಳಿಗೆ ಕೊಟ್ಟರತಕ್ಕ ಡೀಸಲ್ ಮೇಲಿನ ಮಾರಾಟ ತೆರಿಗೆಯನ್ನು ರದ್ದುಮಾಡತಕ್ಕ ಭರವಸೆಯನ್ನು ಸರ್ಕಾರ ಕೊಟ್ಟಿದೆ. ಕೊಟ್ಟರತಕ್ಕ ಭರವಸೆಯನ್ನು ಈಡೇರಿಸಿ, 30 ಸಾವಿರ ಕಿಲೋಲೀಟರ್‌ಗೆ ಸೀಮಿತಗೊಳಿಸಿದೆ ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ಮಾನ್ಯ ಸದಸ್ಯರುಗಳು ಹೇಳಿದ್ದಾರೆ. ಆದರೆ ಒಂದು ವಿಷಯವನ್ನು ನಾನು ಪ್ರಸ್ತಾಪ ಮಾಡುವುದಕ್ಕೆ ಮೊದಲು ಹೇಳುತ್ತೇನೆ. ಮಾನ್ಯ ಜಯಪ್ರಕಾಶ್ ಹೆಗಡೆಯವರು ಮೀನುಗಾರಿಕಾ ಸಚಿವರಾಗಿದ್ದರು. ಸದನದಲ್ಲಿ ಹಣಕಾಸು ಸಚಿವರು ಈ ಮಾರಾಟ ತೆರಿಗೆಯನ್ನು ರದ್ದುಮಾಡುತ್ತೇವೆಂದು ಹೇಳಿದರೂ ಕೂಡ ನಿಮ್ಮ ಸರ್ಕಾರ ಇದ್ದಾಗ ಡೀಸಲ್‌ನ್ನು 30ಸಾವಿರ ಕಿಲೋಲೀಟರ್‌ಗೆ ಸೀಮಿತಗೊಳಿಸಿರುವುದನ್ನು ನೀವು ಒಪ್ಪಿಕೊಳ್ಳಬೇಕು.

ಶ್ರೀ ಕೆ.ಜಯಪ್ರಕಾಶ್ ಹೆಗಡೆ: ನಾನು ಅದನ್ನೆ ಹೇಳಿಕೆಯನ್ನು ಕೊಟ್ಟಿದ್ದು. ಅವರು ಮಾಡಿದ ತಪ್ಪನ್ನು ನಾನು ಕ್ಲಾರಿಫೈ ಮಾಡಿದ್ದೇನೆ. ಈ ಮನೆಯಲ್ಲಿ ಹೇಳಿದ್ದೇನೆ.

ಶ್ರೀ ಬಿ.ರಮಾನಾಥ್ ರೈ: ನೀವು ಹೇಳಿದ್ದೀರಿ, ಎಲ್ಲರೂ ಹೇಳಿದ್ದಾರೆ. ಸ್ವಲ್ಪ ಮಾಹಿತಿ ಕೊರತೆಯಿಂದ ಹಿಂದಿನ ಸರ್ಕಾರ ಕೊಟ್ಟಿದೆ ಈ ಸರ್ಕಾರ ಕೊಟ್ಟಿಲ್ಲವೆನ್ನುವ ಭಾವನೆ ಬರಬಾರದು. ಅದಕ್ಕಾಗಿ ನಾನು ಕ್ಲಾರಿಫಿಕೇಶನ್ ಕೊಟ್ಟದ್ದು. ಅಷ್ಟಕ್ಕೆ ನಾನು ಬಿಡುತ್ತೇನೆ. ನಿಮ್ಮ ಸರ್ಕಾರ 30ಸಾವಿರಕ್ಕೆ ಸೀಮಿತ ಮಾಡಿದೆ. ಈ ವಿಚಾರ ತಪ್ಪು ಮಾಹಿತಿಯಾಗಬಾರದೆಂದು ಸ್ಪಷ್ಟೀಕರಣ ಮಾಡಿ ಈ ಸದನಕ್ಕೆ ತಿಳಿಸಿದೆ. ಕರ್ನಾಟಕ ರಾಜ್ಯ ಕರಾವಳಿಯ ಮೂರು ಜಿಲ್ಲೆಗಳಲ್ಲಿ 300 ಕಿಲೋಮೀಟರ್ ಉದ್ದದ ಸಮುದ್ರ ತೀರ ಇದ್ದು ಡೀಸಲನ್ನು ಇಂಧನವನ್ನಾಗಿ ಬಳಸುವ ಮೂರು ಸಾವಿರಕ್ಕೂ ಹೆಚ್ಚು ಯಾಂತ್ರೀಕೃತ ದೋಣಿಗಳು ಕಾರ್ಯಾಚರಣೆಯಲ್ಲಿರುತ್ತವೆ. ರಾಜ್ಯ ಸರ್ಕಾರದ ಅಧಿಸೂಚನೆ ಸಂಖ್ಯೆ ಎಫ್‌ಸಿ 156 ಎಸ್‌ಎಸ್‌ಎಲ್ 99: 2000 ದಿನಾಂಕ 20-6-99ರಲ್ಲಿ ಯಾಂತ್ರೀಕೃತ ದೋಣಿಗಳು ಬಳಸುವ 30 ಸಾವಿರ ಕಿಲೋಲೀಟರ್ ಡೀಸಲ್ ಮೇಲಿನ ರಾಜ್ಯ ಮಾರಾಟತೆರಿಗೆ ವಿನಾಯಿತಿಯನ್ನು ಪ್ರಕಟಿಸಲಾಗಿದೆ. ಅದರಂತೆ 30 ಸಾವಿರ ಕಿಲೋಲೀಟರ್ ಡೀಸಲ್ ಅನ್ನು ಕರಾವಳಿ ಜಿಲ್ಲೆಗಳಲ್ಲಿ ಮೀನುಗಾರರಿಗೆ ತಂಗುದಾಣ ಮತ್ತು ಬಂದರುಗಳಲ್ಲಿ ಸ್ಥಾಪಿಸಲಾದ ಕರ್ನಾಟಕ ಮೀನುಗಾರಿಕಾ ಅಭಿವೃದ್ಧಿ ನಿಗಮ, ಕರಾವಳಿ ಜಿಲ್ಲೆಗಳ ಮೀನು ಮಾರಾಟ ಸಹಕಾರಿ ಫೆಡರೇಷನ್ ಮತ್ತು ಪ್ರಾಥಮಿಕ ಮೀನುಗಾರರ ಸಹಕಾರ ಸಂಘ ಇವುಗಳಿಗೆ 21ಡೀಸಲ್ ಬಂಕ್‌ಗಳ ಮೂಲಕ ದಿನಾಂಕ 1.9.99ರಿಂದ ವಿತರಿಸಲು ಆದೇಶ ನೀಡಲಾಗಿದೆ. ಕರ್ನಾಟಕ ಕಡಲ ಮೀನುಗಾರಿಕೆ ಕಾಯಿದೆ 1986ರ ಅಡಿಯಲ್ಲಿ ನೋಂದಾಯಿಸಲ್ಪಟ್ಟ ಮೀನುಗಾರಿಕೆ ದೋಣಿಗಳಿಗೆ ಇಲಾಖೆ ನೀಡಿದ ಪುಸ್ತಕದೊಂದಿಗೆ ಮಾಲೀಕ ಅಥವ ಮಾಲೀಕನಿಂದ ಅಧಿಕಾರ ಪಡೆದ ವ್ಯಕ್ತಿ ನಗದು ಬಿಲ್‌ನಲ್ಲಿ ಸಹಿ ಮಾಡಿ ಡೀಸಲ್‌ನ್ನು ಪಡೆಯಬಹುದಾಗಿದೆ. ದಿನಾಂಕ 9-9-99ರಿಂದ 30-12-99ರವರೆಗೆ 19,481 ಕಿಲೋಲೀಟರ್ ಡೀಸಲನ್ನು ಬಳಸಲಾಗಿದೆ. ಈ ಪ್ರಕರಣ 29.2.2000ಕ್ಕೆ 30,940 ಕಿಲೋ ಲೀಟರ್ ಆಗಿದೆ. ಸರ್ಕಾರದ ಅಧಿಸೂಚನೆಯ ಸಂಖ್ಯೆ: ಎಫ್‌ಸಿ 287 ಸಿಎಸ್‌ಎಲ್ 99 ದಿನಾಂಕ 16-2-2000ದಲ್ಲಿ ರಾಜ್ಯದ ಮಾರಾಟ ತೆರಿಗೆ ಮುಕ್ತ ಡೀಸಲ್ ಪ್ರಮಾಣವನ್ನು 30 ಸಾವಿರ ಕಿಲೋಲೀಟರ್‌ನಿಂದ 35 ಸಾವಿರ ಕಿಲೋಲೀಟರ್‌ಗೆ ಮೀನುಗಾರರ ಬೇಡಿಕೆಗೆ ಅನುಗುಣವಾಗಿ ಹೆಚ್ಚಿಸಲಾಗಿದೆ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದನಂತರ 5 ಸಾವಿರ ಕಿಲೋಲೀಟರ್ ಜಾಸ್ತಿ ಮಾಡಿದ್ದೇವೆ. ಕೇಂದ್ರ ಅಬಕಾರಿ ರಿಯಾಯಿತಿ ಯೋಜನೆಯಂತೆ 20 ಮೀಟರ್‌ಗಿಂತ ಕಡಿಮೆ ಇದ್ದ ಯಾಂತ್ರೀಕೃತ ದೋಣಿಗಳು ಬಳಸುವ ಇಂಧನದ ಮೇಲೆ ಪ್ರತಿ ಕಿಲೋಲೀಟರ್‌ಗೆ 351 ರೂಪಾಯಿಗಳ ಸಹಾಯಧನವನ್ನು ನೀಡಲಾಗುತ್ತಿದೆ. ಈ ಸಹಾಯಧನವನ್ನು 1999ನೇ ಸಾಲಿನಲ್ಲಿ

ನೀಡಲಾಗಿದೆ. ಇದೇರೀತಿ ಮೀನುಗಾರಿಕೆಗೆ ಬಳಸಿದ ಡೀಸಲ್ ಮೇಲೆ ಇರುವ ರಾಜ್ಯ ಮಾರಾಟ ತೆರಿಗೆ ಸಹಾಯಧನವನ್ನು 1989-1990ರಿಂದ ಪ್ರತಿ ಕಿಲೋಲೀಟರ್‌ಗೆ 520ರಂತೆ ನೀಡಲಾಗಿದೆ. ಈ ಸಹಾಯಧನವನ್ನು ಬಳಕೆಯ ನಂತರ ನೀಡಲಾಗುತ್ತಿದ್ದು ಈ ಸಾಲಿನಲ್ಲಿ ಮೂಲ ಬೆಲೆಯನ್ನು ತೆರಿಗೆಯಲ್ಲಿ ಕಡಿತಗೊಳಿಸಿ ಡೀಸಲ್ ಅನ್ನು ಮೀನುಗಾರಿಕೆಗೆ ಸರಬರಾಜು ಮಾಡಲಾಗುತ್ತಿದೆ. ಈ ಸಹಾಯಧನವನ್ನು ಇನ್‌ಲೆಟ್ ದೋಣಿಗಳಿಗೆ ವಾರ್ಷಿಕ ರೂಪಾಯಿ ಸಾವಿರ, ವಾಲ್‌ಬೋಟ್‌ಗಳಿಗೆ ವಾರ್ಷಿಕ ಮೂರು ಸಾವಿರ, ಪರ್ಸೀನ್‌ದೋಣಿಗಳಿಗೆ ವಾರ್ಷಿಕ 9ಸಾವಿರ ಗರಿಷ್ಟ ಮಿತಿಗೊಳಿಸಿ 1989ರಿಂದ ನೀಡಲಾಗುತ್ತಿದೆ. ಇದೇ ಸಂದರ್ಭದಲ್ಲಿ ಹೇಳುವುದಾದರೆ, ಈಗ ಏನು ಮೀನುಗಾರರ ಬೇಡಿಕೆಗಳು ಇವೆ ಅವುಗಳನ್ನು ಈಡೇರಿಸಲು ಮಾನ್ಯ ಮುಖ್ಯಮಂತ್ರಿಗಳು ಉತ್ಸುಕರಾಗಿದ್ದಾರೆ. ರಾಜ್ಯದ ಮಾರಾಟ ತೆರಿಗೆ ಮುಕ್ತ ಡೀಸಲ್‌ನ ಪ್ರಮಾಣವನ್ನು 35 ಸಾವಿರದಿಂದ 40 ಸಾವಿರಕ್ಕೆ ಅದನ್ನು ಹೆಚ್ಚಿಸಲು ಸರ್ಕಾರ ನಿರ್ಧರಿಸಿದೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಯು.ಆರ್.ಸಭಾಪತಿ: ಒಂದು ನಿಮಿಷ. ಅಧ್ಯಕ್ಷರೇ, ತಾವು ಒಂದು ರೂಲಿಂಗ್ ಕೊಡಬೇಕು. ಸದನದಲ್ಲಿ ಮುಂಗಡಪತ್ರದಲ್ಲಿ ಮಾರಾಟ ತೆರಿಗೆಯನ್ನು ಮನ್ನಾ ಮಾಡಲಾಗಿದೆ ಎಂದು ಹೇಳಿ ಸರ್ಕಾರ ಘೋಷಣೆ ಮಾಡಿದೆ. ಈ ಘೋಷಣೆ ಮಾಡಿದ ಮೇಲೆ ಸರ್ಕಾರಿ ಆದೇಶದಲ್ಲಿ 30 ಸಾವಿರಕ್ಕೆ ಸೀಮಿತಗೊಳಿಸುವುದಕ್ಕೆ ಅವಕಾಶ ಇದೆಯಾ? ದಯವಿಟ್ಟು ತಾವು ಮಾರ್ಗದರ್ಶನ ಕೊಡಬೇಕು. ಒಂದು ಸಲ ಸರ್ಕಾರದವರು ಮುಂಗಡ ಪತ್ರದಲ್ಲಿ ಮಾರಾಟ ತೆರಿಗೆಯನ್ನು ಮನ್ನಾಗೊಳಿಸಲಾಗಿದೆ ಎಂದು ಹೇಳಿ ಇಲ್ಲಿ ಸ್ಪಷ್ಟೀಕರಣ ಕೊಟ್ಟಮೇಲೆ ಮತ್ತೆ ಅದನ್ನು ಯಾವುದೇ ಒಂದು ಲೀಟರ್‌ಗಳಿಗಾಗಿ ಸೀಮಿತಗೊಳಿಸುವುದಕ್ಕೆ, ಸರ್ಕಾರಿ ಆದೇಶ ಕೊಡಲಿಕ್ಕೆ ಸಾಧ್ಯತೆ ಉಂಟೆ? ದಯವಿಟ್ಟು ತಾವು ಮಾರ್ಗದರ್ಶನ ಕೊಡಿ. ಇದು ನಮಗೆ ಅರ್ಥವಾಗುತ್ತಿಲ್ಲ.

ಅಧ್ಯಕ್ಷರು: ಇರಿ. ಅವರು ಉತ್ತರ ಹೇಳಲಿ.

ಶ್ರೀ ವಸಂತ ವಿ.ಸಾಲಿಯಾನ್: ನಾವು ಇದರ ಬಗ್ಗೆ ಹಕ್ಕುಚ್ಯುತಿ ತರಬಹುದಾ?

ಶ್ರೀ ಯು.ಆರ್.ಸಭಾಪತಿ: ತಾವು ಕಡತ ತರಿಸಿ ಕೇಳಿ. ಇದು ಸದನಕ್ಕೆ ಮಾಡಿದ ಅಗೌರವ ಎಂದು ನಾನು ಹೇಳುತ್ತೇನೆ.

ಶ್ರೀ ಜಯಪ್ರಕಾಶ ಹೆಗಡೆ: ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಮೊದಲು 45 ಸಾವಿರ ಕಿಲೋಲೀಟರ್ ಇದ್ದುದನ್ನು ತಿದ್ದಿ 40 ಎಂದು ಮಾಡಿದ್ದಾರೆ. ಹಾಗೆ ಏಕೆ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಆದರೆ ಹಿಂದೆ ನಾವು ಆಯವ್ಯಯ

ಪಟ್ಟಿಯಲ್ಲಿ ಇದ್ದನ್ನು ಸರ್ಕಾರಿ ಅಧಿಸೂಚನೆ ಹೊರಡಿಸುವಾಗ ತಪ್ಪು ಮಾಡಿದ್ದಾರೆ ಎಂದು ಪುನಃ on the floor of the House ನಾವು ಕ್ಲಾರಿಫೈ ಮಾಡಿದ್ದೇವೆ. ಪ್ರಾಯಶಃ ಈಗ ಅವರು ಅದನ್ನು ಸರಿಪಡಿಸಬೇಕಾಗುತ್ತದೆ. ಒಂದುವೇಳೆ ನಾನು ಇದ್ದಿದ್ದರೆ ಸರಿಪಡಿಸುತ್ತಿದ್ದೆ. ನಾನು ರಾಜಿನಾಮೆ ಕೊಟ್ಟು ಹೊರಬಂದಿದ್ದರಿಂದ ಅದನ್ನು ಸರಿಪಡಿಸಲಿಕ್ಕೆ ಆಗಲಿಲ್ಲ. ಪುನಃ ಅದನ್ನು ಹೇಗೆ ಸರಿಮಾಡಿಸಬೇಕು ಎಂದು ನಾನು ಅಲ್ಲಿ ಹೋಗಿ ತೋರಿಸುತ್ತೇನೆ, ಅವರು ಇಲ್ಲಿಗೆ ಬರಲಿ.

(ಗೊಂದಲ)

ಶ್ರೀ ಯು.ಆರ್.ಸಭಾಪತಿ: ಅಧ್ಯಕ್ಷರೇ, ತಾವು ನಮಗೆ ಮಾರ್ಗದರ್ಶನ ನೀಡಬೇಕು. ಸದನದಲ್ಲಿ ಒಂದು ಸಲ ಘೋಷಣೆ ಆದಮೇಲೆ....

ಅಧ್ಯಕ್ಷರು: ಸರ್ಕಾರದವರು ಏನು ಉತ್ತರ ಹೇಳುತ್ತಾರೋ ಹೇಳಲಿ.

ಶ್ರೀ ವಸಂತ ಬಿ.ಸಾಲಿಯಾನ: ಮೊದಲು ತಾವು ಒಂದು ರೂಲಿಂಗ್ ಕೊಡಬೇಕಾಗುತ್ತದೆ. ಏಕೆಂದರೆ ಹಿಂದಿನ ಸರ್ಕಾರ ಒಂದು ಮುಂಗಡಪತ್ರದಲ್ಲಿ ತಂದು ಇಲ್ಲಿ ಸ್ಪಷ್ಟನೆ ಕೊಟ್ಟಮೇಲೆ ಈಗ ಅದನ್ನು ಕೈಬಿಡುವುದಾದರೆ ನಾವು ಅದರ ಮೇಲೆ ಹಕ್ಕುಚ್ಯುತಿ ತರಬೇಕಾಗುತ್ತದೆ. ಆದರೆ ಯಾರಮೇಲೆ ಹಕ್ಕುಚ್ಯುತಿಯನ್ನು ತರಬೇಕು?

ಶ್ರೀ ಜಯಪ್ರಕಾಶ್ ಹೆಗಡೆ: ಮಾನ್ಯ ಸಚಿವರಾದ ಶ್ರೀ ರಮಾನಾಥರೈ ಅವರು ಸ್ವತಃ ಹೇಳಿಕೆಯನ್ನು ಕೊಟ್ಟಿದ್ದಾರೆ. 50 ಸಾವಿರ ಕಲೋಲೀಟರ್ ನಾವು ಬಿಡುಗಡೆ ಮಾಡುತ್ತೇವೆ ಎಂದು ಹೇಳಿಕೆಯನ್ನು ಕೊಟ್ಟಿದ್ದಾರೆ.....

ಶ್ರೀ ಡಿ.ವಿ.ಸದಾನಂದಗೌಡ: ತುರ್ತಾಗಿ ಹತ್ತು ಕಿಲೋಲೀಟರ್ ಆದರೂ ಬೇಕು. ನಮ್ಮ ಬೇಡಿಕೆ ಏನೆಂದರೆ ಈಗ ಸರ್ಕಾರ ಮನಸ್ಸು ಮಾಡಿ ಹತ್ತು ಕಿಲೋಲೀಟರ್ ಆದರೂ ಜಾಸ್ತಿ ಮಾಡಬೇಕು. ಏಕೆಂದರೆ ಬರೇ ಇವತ್ತು ನಾವು ಚರ್ಚೆಮಾಡಿ ಸದನ ಮುಗಿಯುವವರೆಗೆ ಮಾತ್ರ ಅಲ್ಲಿ ಡೀಸಲ್ ಕೊಡುವಂಥಾದ್ದು ಅಲ್ಲ. ಅದರ ನಂತರ ಕೂಡ ಅವರು ಬದುಕಬೇಕು. ಏಕೆಂದರೆ ಮತ್ತೆ ನಾವು ಮಾತನಾಡುವ ಪ್ರಮೇಯ ಉದ್ಭವವಾಗುವುದಿಲ್ಲ. ಆದಕಾರಣ ನನ್ನ ವಿನಂತಿ ಇಷ್ಟೆ. ಮಂತ್ರಿಗಳು ಮನಸ್ಸು ಮಾಡಬೇಕು. ಹತ್ತು ಸಾವಿರ ಕಿಲೋಲೀಟರ್ ಜಾಸ್ತಿ ಮಾಡಬೇಕು.

ಶ್ರೀ ವಿಜಯಕುಮಾರ್ ಶೆಟ್ಟಿ: ಮಾನ್ಯ ಅಧ್ಯಕ್ಷರೇ, ನಮಗೆ ಈ ಆರ್ಥಿಕ ವರ್ಷ ಆಖೈರು ಆಗುವವರೆಗೆ 15 ಸಾವಿರ ಕಿಲೋಲೀಟರ್‌ನ ಅವಶ್ಯಕತೆ ಇದೆ. ಅಲ್ಲಿ ಈಗಾಗಲೇ ಸ್ಟ್ರೈಕ್ ಮಾಡಲಿಕ್ಕೆ ಹೊರಟಿದ್ದಾರೆ. ಸ್ಟ್ರೈಕ್ ಈಗಾಗಲೇ ಪ್ರಾರಂಭವಾಗಿದೆ.

(ಗೊಂದಲ)

ಶ್ರೀ ಯು.ಆರ್.ಸಭಾಪತಿ: ಅಧ್ಯಕ್ಷರೇ, ನನ್ನ ಮುಖ್ಯ ಪ್ರಶ್ನೆಗೆ ಉತ್ತರ ಕೊಡಿ. ದಯವಿಟ್ಟು ನೀವು ರೂಲಿಂಗ್ ಕೊಡಿ. ಆಮೇಲೆ ನಾವು ಚರ್ಚೆ ಮಾಡೋಣ. ಹತ್ತು ಸಾವಿರ ಅಲ್ಲ, ಹದಿನೈದು ಸಾವಿರ ಅಲ್ಲ, ಏನು ಬೇಕಾದರೂ ಮಾಡಿಕೊಳ್ಳುವ ಆದರೆ ಒಂದು ಸಲ ಈ ಸದನದಲ್ಲಿ ಪ್ರಕಟಗೊಳಿಸಿದ ಮೇಲೆ ಮತ್ತೆ ಅದನ್ನು ಯಾವ ಅಧಿಕಾರಿಗಳು ತಿದ್ದುಪಡಿ ಮಾಡುವುದಕ್ಕೆ ಆಗುತ್ತದೆ? ಈ ಸದನಕ್ಕೆ ಗೌರವ ಇಲ್ಲವೇನು?

(ಗೊಂದಲ)

ಶ್ರೀ ವಿಜಯಕುಮಾರ ಶೆಟ್ಟಿ: ಮಾನ್ಯ ಅಧ್ಯಕ್ಷರೇ, ಈ ಸಮಯ ಕಳೆದ ಮೇಲೆ ಮತ್ತೆ ಮಿನುಗಾರಿಕೆಗೆ ಬರುವುದಕ್ಕೆ ಆಗುವುದಿಲ್ಲ. ಈಗ ಪೀಕ್ ಸೀಸನ್ ಇರುವಂಥಾದ್ದು. ಆದ್ದರಿಂದ ಈ ಸಂದರ್ಭದಲ್ಲಿ 15 ಸಾವಿರ ಕಿಲೋಲೀಟರ್‌ನ್ನು ತಾವು ದಯವಿಟ್ಟು ಕೊಡಿ ಎಂದು ಹೇಳಬೇಕು.

ಅಧ್ಯಕ್ಷರು: ಈಗ ಮಾನ್ಯ ಸದಸ್ಯರು ಏನು ಪಾಯಿಂಟ್‌ಗಳನ್ನು ಎತ್ತಿದ್ದಾರೋ ಅದರ ಬಗ್ಗೆ.....

(ಗೊಂದಲ)

(ಅನೇಕ ಸದಸ್ಯರು ಏಕಕಾಲದಲ್ಲಿ ಮಾತನಾಡಲು ಪ್ರಾರಂಭಿಸಿದರು)

ಅಧ್ಯಕ್ಷರು: ಸಭಾಪತಿಯವರೇ, ಮಂತ್ರಿಗಳು ಮೊದಲು ಉತ್ತರ ಹೇಳಲಿ.

ಶ್ರೀ ಬಿ.ರಮಾನಾಥ ರೈ: ಹಿಂದಿನ ಸರ್ಕಾರವೇ 30 ಸಾವಿರಕ್ಕೆ ಸೀಮಿತಗೊಳಿಸಿ ಆದೇಶ ಮಾಡಿದೆ. ಆದರೆ ಮಿನುಗಾರಿಕೆ ಮಾಡತಕ್ಕಂಥ ಜನರ ಬೇಡಿಕೆಗೆ ನಾವು ಮಾನ್ಯತೆ ಕೊಟ್ಟು ಮೊನ್ನೆ ಎರಡು ತಿಂಗಳ ಹಿಂದೆ 5 ಸಾವಿರ ಕಿಲೋಲೀಟರ್ ಜಾಸ್ತಿ ಮಾಡಿದ್ದೇವೆ. ಐದು ಸಾವಿರ ಕಿಲೋಲೀಟರ್ ಈ ವರ್ಷಕ್ಕೆ ಸಾಕಾಗುತ್ತದೆ.

(ಗೊಂದಲ)

ಶ್ರೀ ಜಯಪ್ರಕಾಶ ಹೆಗಡೆ: ಅವರು ತಪ್ಪು ಅಭಿಪ್ರಾಯ ಕೊಡುತ್ತಿದ್ದಾರೆ.

(ಗೊಂದಲ)

ಅಧ್ಯಕ್ಷರು: ಅವರು ಹೇಳುತ್ತಿರುವುದು ಹಿಂದಿನ ಬಜೆಟ್‌ನಲ್ಲಿ ಇದ್ದುದನ್ನು

ಅಧಿಕಾರಿಗಳು ಯಾವರೀತಿ ಬದಲಾವಣೆ ಮಾಡಿದರು ಎಂದು. ಆ ಪ್ರಶ್ನೆಗೆ ನೀವೇನೂ ಉತ್ತರ ಹೇಳಲಿಲ್ಲ.

ಶ್ರೀ ಬಿ.ರಮಾನಾಥ ರೈ: ಸನ್ಮಾನ್ಯ ಅಧ್ಯಕ್ಷರೇ, ಈಗ 30 ಸಾವಿರಕ್ಕೆ ಸೀಮಿತ ಮಾಡಿದಂಥವರು ಹಿಂದಿನ ಸರ್ಕಾರ.

ಅಧ್ಯಕ್ಷರು: ಅಧಿಕಾರಿಗಳು ಹೇಗೆ ಬದಲಾವಣೆ ಮಾಡಿದರು ಅನ್ನುವುದು ಇಲ್ಲಿಯ ಪ್ರಶ್ನೆ. ಅದಕ್ಕೆ ಉತ್ತರ ಹೇಳಿ.

ಶ್ರೀ ಬಿ.ರಮಾನಾಥ ರೈ: ಈ ಸಲ ನಾವು ಹತ್ತು ಸಾವಿರ ಕಲೋ ಲೀಟರ್ ಜಾಸ್ತಿ ಮಾಡುತ್ತಿದ್ದೇವೆ.

ಶ್ರೀ ಅರಗ ಜ್ಞಾನೇಂದ್ರ: ಬಜೆಟ್‌ನಲ್ಲಿ ಏನು ಪ್ರಸ್ತಾಪ ಮಾಡಿದ್ದಾರೆ ಅದನ್ನು ಸರ್ಕಾರ ಒಪ್ಪಿಕೊಂಡಿದೆ. ಇದು ಚೌಕಾಸಿ ವ್ಯಾಪಾರ ಏಕೆ? ಇದು ಮೊನುಗಾರರಿಗೆ ಉಪಯೋಗವಾಗುವಂಥ ವಿಷಯ.

ಅಧ್ಯಕ್ಷರು: ನೀವು ಏನಾದರೂ ಉತ್ತರ ಕೊಡುವುದಿದ್ದರೆ ಕೊಡಿ. ಇಲ್ಲದಿದ್ದರೆ ನಾಳೆ ನಾಡಿದ್ದು ನಾನು ರೂಲಿಂಗ್ ಕೊಡುತ್ತೇನೆ. ಅಧಿಕಾರಿಗಳು ಯಾವರೀತಿ, ಏಕೆ ಮಾರ್ಪಾಡು ಮಾಡಿದರು ಎಂಬುದರ ಬಗ್ಗೆ ನಿಮ್ಮದೇನಾದರೂ ಉತ್ತರ ಇದ್ದರೆ ಹೇಳಿ. ಇಲ್ಲದಿದ್ದರೆ ರೂಲಿಂಗ್‌ನ್ನು ನಾನು ನಾಳೆ, ನಾಡಿದ್ದು ಕೊಡುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ: ಬಜೆಟ್ ಪಾಸ್ ಮಾಡುವಾಗ ನಿಖರವಾದ ಏನು ಭಾಷೆ ಬಳಸಿದ್ದಾರೆ ಎನ್ನುವುದನ್ನು ಹೇಳಿಲ್ಲ. ನಿಖರವಾದ ಭಾಷೆಯನ್ನು ಬಳಸಿದ್ದನ್ನು ಹೇಳಿ ತದನಂತರ ಆ ಆಜ್ಞೆಯನ್ನು ಪ್ರಸ್ತಾಪ ಮಾಡಿದ್ದರೆ ಅದಕ್ಕೆ ಬರತಕ್ಕಂಥ ವ್ಯತ್ಯಾಸವನ್ನು ಕಂಡುಹಿಡಿಯಬಹುದು. ನಿಖರವಾದ ಯಾವ ಭಾಷೆಯಲ್ಲಿ ಹೇಳಿದ್ದಾರೆ?

ಶ್ರೀ ಜಯಪ್ರಕಾಶ್ ಹೆಗಡೆ: ಬಜೆಟ್‌ನಲ್ಲಿ ಇದೆ.

ಶ್ರೀ ಕಾಗೋಡು ತಿಮ್ಮಪ್ಪ: ಏನಂತ ಇದೆ?

(ಗೊಂದಲ)

ಶ್ರೀ ಎನ್.ಯೋಗೀಶ್ ಭಟ್: ಇದರ ಬಗ್ಗೆ ನಾನು ಕ್ಲಾರಿಫಿಕೇಶನ್ ಕೇಳಬಹುದಾ? ಸನ್ಮಾನ್ಯ ಜಯಪ್ರಕಾಶ ಹೆಗಡೆಯವರು ಸಚಿವರಾಗಿ ಇಲ್ಲಿ ಉತ್ತರ ಕೊಟ್ಟಿದ್ದಾರೆ...

ಶ್ರೀ ಜಯಪ್ರಕಾಶ್ ಹೆಗಡೆ: 1999-2000ನೇ ವರ್ಷದ ಬಜೆಟ್‌ನ್ನು ನಾನು ಪುನಃ

ಓದಿ ಹೇಳುತ್ತೇನೆ.....

(ಗೊಂದಲ)

(ಅನೇಕ ಸದಸ್ಯರು ಏಕಕಾಲದಲ್ಲಿ ಮಾತನಾಡತೊಡಗಿದರು)

"Fishing requisites of all kinds excepting mechanical

ಶ್ರೀ ಕಾಗೋಡು ತಿಮ್ಮಪ್ಪ: ಇದು ಪ್ರಿವಿಲೇಜ್ ಮೋಶನ್ನಾ?

ಅಧ್ಯಕ್ಷರು: ಪ್ರಿವಿಲೇಜ್ ಮೋಶನ್ನ್ನೇ ಮೂವ್ ಮಾಡಿದ್ದಾರೆ. ನಾನು ಅದನ್ನು ಜಿರೋ ಅವರ್‌ಗೆ ಕನ್ವರ್ಟ್ ಮಾಡಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ: ಅದರಲ್ಲಿ ಪೂರ್ಣವಾಗಿ ಏನು ಪದ ಇದೆ?

ಶ್ರೀ ಜಯಪ್ರಕಾಶ್ ಹೆಗಡೆ: ಮಾನ್ಯ ಅಧ್ಯಕ್ಷರೆ, Fishing requisites of all kinds excepting mechanical boats.."ಅಂದರೆ boat ತೆಗದುಕೊಳ್ಳುವುದಕ್ಕೆ ಇಲ್ಲ ಅಂತ. "...but inclding ice, disel etc., required by fishermen will be exempt from tax." ಎಂದಿದೆ ಅದಕ್ಕೆ ಲಿಮಿಟ್ ಏನೂ ಹಾಕಿಲ್ಲ. ಇದರಲ್ಲಿ ಎಲ್ಲಿಯೂ 30 ಸಾವಿರ ಕಿಲೋ ಲೀಟರ್‌ಗೆ ನಾವು ಎಕ್ಸಂಪ್‌ಶನ್ ಮಾಡುತ್ತೇನೆ ಎಂದು ಹೇಳಿಕೆಯನ್ನು ಕೊಟ್ಟಿಲ್ಲ.

ಅಧ್ಯಕ್ಷರು: ಹಾಗಿದ್ದರೆ ಇಲ್ಲಿ ಕೇಳಿ. ಅದು ಈ ಸರ್ಕಾರ ಬಂದಮೇಲೆ ಮಾಡಿದ್ದಾರೋ, ಮೊದಲು ಮಾಡಿದ್ದಾರೋ ಎನ್ನುವ ಪ್ರಶ್ನೆ ಇದೆ.

ಶ್ರೀ ಜಯಪ್ರಕಾಶ್ ಹೆಗಡೆ: ಮೊದಲು ಮಾಡಿದ್ದಾರೆ.

(ಗೊಂದಲ)

ಅಧ್ಯಕ್ಷರು: ಇವರು ಮಾಡಿದ್ದಾರೋ, ಯಾವ ಸರ್ಕಾರದಲ್ಲಿ ಮಾಡಿದ್ದಾರೆ ಎನ್ನುವ ಪ್ರಶ್ನೆ ಇದೆ...

ಶ್ರೀ ಬಿ.ರಮಾನಾಥ ರೈ: 30 ಸಾವಿರಕ್ಕೆ ಸೀಮಿತ ಮಾಡಿದ್ದು ಯಾರು? ನಮ್ಮ ಸರ್ಕಾರ ಸೀಮಿತ ಮಾಡಿಲ್ಲ. ಇದು ಅವರ ಸರ್ಕಾರ ಇದ್ದಾಗ ಮಾಡಿದ್ದು. ಅವರ ಸರ್ಕಾರ ಇದ್ದಾಗಲೇ 30 ಸಾವಿರ ಎಂದು ಮಾಡಿದ್ದು. ನಾವು ಈ ಸಾರಿ ಹತ್ತು ಸಾವಿರ ಜಾಸ್ತಿ ಮಾಡಿದ್ದೇವೆ.

ಅಧ್ಯಕ್ಷರು: ಈ ಗೊಂದಲ ಬೇಕಾಗಿಲ್ಲ. ತಾವು ಏನಾದರೂ ಉತ್ತರ ಹೇಳುವುದು ಇದ್ದರೆ ಒಂದೆರಡು ವಾಕ್ಯಗಳಲ್ಲಿ ಹೇಳಿ. ಇಲ್ಲದಿದ್ದರೆ ನಾಳೆ ನಾಡಿದ್ದು ನಾನು ರೂಲಿಂಗ್ ಕೊಡುತ್ತೇನೆ. ಯಾವ ಸರ್ಕಾರ ಮಾಡಿದರು, ಎಷ್ಟು ಮಾಡಿದರು ಎಂದು ವಿಶದವಾಗಿ ವಿಷಯಗಳನ್ನು ತಿಳಿದುಕೊಂಡು ನಾಳೆ ಅಥವಾ ನಾಡಿದ್ದು ನಾನು ರೂಲಿಂಗ್ ಕೊಡುತ್ತೇನೆ.

(ಗೊಂದಲ)

ಶ್ರೀ ಬಿ.ರಮಾನಾಥ ರೈ: ಮಾರಾಟ ತೆರಿಗೆ ವಿನಾಯಿತಿ ಮಾಡಬೇಕಾದದ್ದು ಆರ್ಥಿಕ ಇಲಾಖೆಯವರು....

ಶ್ರೀ ಯು.ಆರ್.ಸಭಾಪತಿ: ಮಾನ್ಯ ಮಂತ್ರಿಗಳು ಲಿಖಿತ ಮೂಲಕ ಕೊಡುವ ಉತ್ತರದಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ಮಾರಾಟ ತೆರಿಗೆ ಮನ್ನಾ ಮಾಡಲಾಗಿದೆಯೇ ಎಂದು ಕೇಳಿದ್ದಕ್ಕೆ 'ಹೌದು' ಎಂದು ಹೇಳಿದ್ದಾರೆ. ನಿನ್ನೆ ಸದನದಲ್ಲಿ ಅವರೇ ಉತ್ತರವನ್ನು ಕೊಟ್ಟದ್ದಾರೆ. ಲಿಖಿತ ಮೂಲಕ ಕೇಳುವ ಪ್ರಶ್ನೆಗೆ ಹೇಳಿದ್ದಾರೆ.

ಶ್ರೀ ಅರಗ ಜ್ಞಾನೇಂದ್ರ: ಇದರಲ್ಲಿ ಚೌಕಾಶಿ ಏಕೆ ಮಾಡುತ್ತಿದ್ದಾರೆ?

(ಗೊಂದಲ)

ಅಧ್ಯಕ್ಷರು: ಸಭಾಪತಿಯವರೇ, ಇದನ್ನು ಇಲ್ಲಿಗೇ ಸಾಕು ಮಾಡೋಣ. ನಾನು ರೂಲಿಂಗ್ ಕೊಡುತ್ತೇನೆ ಎಂದು ಹೇಳಿದ್ದೇನೆ. ಪುನಃ ಏಕೆ ಮತ್ತೆ ರೈಸ್ ಮಾಡುತ್ತೀರಿ? ಇನ್ನು ಮುಂದಿನ ಪ್ರಶ್ನೆ. ಬೈರೇಗೌಡರು ಮತ್ತು ಸಿಂಧ್ಯಾರವರೇ, ಒಂದು ನಿಮಿಷ ನಾನು ಹೇಳುವವರೆಗೂ ಕೇಳಿಬಿಡಿ. ಆಮೇಲೆ ನೀವು ಮಾತನಾಡಿ.

ಶ್ರೀ ಎನ್.ಯೋಗೀಶ್ ಭಟ್: ಸನ್ಮಾನ್ಯ ಅಧ್ಯಕ್ಷರೇ, ಇದು ಪ್ರಿವಿಲೇಜ್ ಆಗುತ್ತದೆಯಾ? ನನಗೆ ಮಾಹಿತಿ ಬೇಕು.

ಅಧ್ಯಕ್ಷರು: ನಾನು ಮೆರಿಟ್ ಮೇಲೆ ತೀರ್ಮಾನ ಮಾಡುತ್ತೇನೆ.

(ಗೊಂದಲ)

ಶ್ರೀ ಬಿ.ರಮಾನಾಥ ರೈ: ನಮ್ಮ ಸರ್ಕಾರ ಬಂದಮೇಲೆ ನಾವು ಹತ್ತು ಸಾವಿರ ಲೀಟರ್ ಜಾಸ್ತಿ ಮಾಡಿದ್ದೇವೆ. ಈಗ 31ನೇ ತಾರೀಖಿನವರೆಗೆ ಅದು ಸಾಕಾಗುತ್ತದೆ....

ಅಧ್ಯಕ್ಷರು: ಆ ವಿಷಯ ಮುಗಿಯಿತು.

ಶ್ರೀ ಜಯಪ್ರಕಾಶ್ ಹೆಗಡೆ: ನಾನು ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಒಂದುವೇಳೆ ಈ ಸದನ ಪಾಸ್ ಮಾಡಿದ ಬಜೆಟ್‌ನ್ನು ಬದಲಾಯಿಸಿ ಅಧಿಕಾರಿಗಳು ಸೇರಿ ಆದೇಶ ಹೊರಡಿಸುವುದಕ್ಕೆ ಅವಕಾಶ ಮಾಡಿಕೊಟ್ಟಲ್ಲಿ ಇನ್ನುಮುಂದೆ ಯಾವುದೇ ಆಯವ್ಯಯ ಮಂಡನೆಯ ನಂತರ ಬದಲಾವಣೆ ಮಾಡಬಹುದು ಎಂದಾಗುತ್ತದೆ....

ಅಧ್ಯಕ್ಷರು: ಆಯಿತು. ನಾನು ಇದರ ಬಗ್ಗೆ ನಾಳೆ, ನಾಡಿದ್ದು ರೂಲಿಂಗ್ ಕೊಡುತ್ತೇನೆ.

ಶ್ರೀ ಬಿ.ರಮಾನಾಥ ರೈ: ಅಧ್ಯಕ್ಷರೇ, ಇದು ಯಾವ ಬಜೆಟ್ ಮತ್ತು ಯಾರ ಬಜೆಟ್?

ಶ್ರೀ ಜಯಪ್ರಕಾಶ್ ಹೆಗಡೆ: ಇದು ಸದನದ ಗೌರವ ಪ್ರಶ್ನೆ ಇದೆ.

ಅಧ್ಯಕ್ಷರು: ಮುಗಿದ ವಿಷಯವನ್ನು ಪುನಃ ಎತ್ತುತ್ತಿದ್ದೀರಿ.

ಶ್ರೀ ಪಿ.ಜಿ.ಆರ್.ಸಿಂಧ್ಯ: ಗೌರವಾನ್ವಿತ ಮಂತ್ರಿಗಳು ಯಾವ ಬಜೆಟ್, ಯಾರು ಮಾಡಿದ ಬಜೆಟ್ ಎಂದು ಕೇಳುತ್ತಿದ್ದಾರೆ.

4.30 ಪಿಎಂ

ಮಾನ್ಯ ಗೌರವಾನ್ವಿತ ಮಂತ್ರಿಗಳು ಇದು ಯಾವ ಬಡ್ಜೆಟ್, ಯಾರು ಮಾಡಿದ್ದು ಈ ಬಜೆಟ್ ಎಂದು ಹೇಳುತ್ತಾ ಇದ್ದಾರೆ. ಆ ಬಡ್ಜೆಟ್ ಮಾಡಿದವರು, ಮಂಡಿಸಿದವರು ನಾವು. ನಾವು ಸರ್ಕಾರದಲ್ಲಿದ್ದಂಥ ಸಂದರ್ಭದಲ್ಲಿ ಮಾಡಿರತಕ್ಕಂತಾದ್ದು. I am not going into the merit of the case ಸರಿಯೋ ತಪ್ಪೋ ಎಂದು. ಯಾವ ಬಜೆಟ್ ಎಂದು ಹೇಳಿದರೆ, ನೀವು ಪ್ರತಿ ತಿಂಗಳೂ ಸಂಬಳ ತೆಗೆದುಕೊಳ್ಳುತ್ತಿದ್ದೀರಲ್ಲಾ, ಅದೇ ಬಡ್ಜೆಟ್. ಅದನ್ನು ನೀವು ತೀರ್ಮಾನ ಮಾಡಬೇಕು. ಏಕೆಂದರೆ, ಈಗ ನೀವು ಸರ್ಕಾರೀ ಆದೇಶ ಮಾಡಿದ್ದೀರಿ. ಈಗ ಅಧಿವೇಶನ ಸೇರಿದೆ. ನೀವು ಸರ್ಕಾರಿ ಆದೇಶ ಮಾಡಿದ್ದರೆ ಸರಿ, ನಾವೇನು ತಪ್ಪು ಎಂದು ಹೇಳುವುದಿಲ್ಲ. ನಾವು ಆ ರಿಯಾಯಿತಿಯನ್ನು ನಿಲ್ಲಿಸಿದ್ದೇವೆಂದು ಹೇಳಿದ್ದಾರೆ. ಅದನ್ನು ಮಾನ್ಯಸದಸ್ಯರು ಕೇಳುತ್ತಾ ಇದ್ದಾರೆ. ನೀವು ಮಾಡಿದ್ದರೆ ಸರಿ. ನಾವಿಷ್ಟೇ ಕೊಡುವುದು ಎಂದು ಹೇಳಿ, ನಾವೇನು ಮಾಡುವುದಕ್ಕಾಗುತ್ತದೆ ವಿರೋಧ ಪಕ್ಷದಲ್ಲಿದ್ದುಕೊಂಡು. ಅದು ನಿಮಗೆ ಸಂಬಂಧಪಟ್ಟಿದ್ದು. ಅದು ಆಜ್ಞೆ ಆಗಿದೆಯೇ? ಆಜ್ಞೆ ಆದಮೇಲೆ, ಯಾವುದೇ ಫೈನಾನ್ಷಿಯಲ್ ಅಮೆಂಡ್‌ಮೆಂಟ್ಸ್ ಆದಮೇಲೆ ತಮಗೆ ಗೊತ್ತಿದೆ. ಈ ಸದನಕ್ಕೆ ಇದನ್ನು ಮಾಡಿದ್ದೇವೆಂದು ಒಂದು ನೋಟೀಸ್ ಮೂಲಕವಾಗಿ ತಿಳಿಸುತ್ತಾರೆ.

ಕಾಗದಪತ್ರಗಳನ್ನು ಸಭೆಯ ಮುಂದೆ ಇಡತಕ್ಕಂಥಾದ್ದು ಎಂದು ಹೇಳಿದರೆ ಅದೇ. ಆದನ್ನು ಮಾಡಿದ್ದೇವೆ ಎಂಬುದನ್ನು ತಾವು ಹೇಳಿ. ಮೀನುಗಾರರ ಬಗ್ಗೆ ನಮಗೆಷ್ಟು ಕಾಳಜಿ ಇದೆಯೋ ಅಷ್ಟೇ ಕಾಳಜಿ ನಿಮಗೂ ಇರಬಹುದು. ಮಾಡುವುದಕ್ಕಾಗದೇ ಇರುವುದಕ್ಕೆ ಹಣಕಾಸಿನ ಇತಿಮಿತಿಗಳು ಇರಬಹುದು. ಅದನ್ನೆಲ್ಲಾ ನಾವು ಅರ್ಥ ಮಾಡಿಕೊಳ್ಳುತ್ತೇವೆ. Let us not politicise the issue.

ಅಧ್ಯಕ್ಷರು: ಈಗ ಆ ವಿಷಯ ಮುಗಿಯಿತು. ಮಾನ್ಯ ಭೈರೇಗೌಡರೇ ತಮ್ಮ ಪಕ್ಷದಿಂದ ನುಸಿ ರೋಗದ ಬಗ್ಗೆ ಸುಮಾರು 8-10 ಜನ ಸಹಿ ಮಾಡಿ ಕೊಟ್ಟಿದ್ದಾರೆ. ಇದು ಹೆಚ್ಚು ಕಾಲ ತೆಗೆದುಕೊಳ್ಳುತ್ತದೆ. ಬೇರೆಯವರೂ ಮಾತನಾಡುವವರು ಇದ್ದಾರೆ. ಏಕೆಂದರೆ, ಇದು ರಾಜ್ಯಕ್ಕೆಲ್ಲಾ ಸಂಬಂಧಪಟ್ಟಿದ್ದು. ಅದಕ್ಕೋಸ್ಕರ We will convert that one under Rule 69. ಅಂದರೆ ಸುಮಾರು ಒಂದು, ಒಂದೂವರೆ ಗಂಟೆಯ ಕಾಲ ತೆಗೆದುಕೊಳ್ಳುತ್ತದೆ. ನಮ್ಮ ಫೋರ್ಪಡೆಯವರು ಒಂದು ಬಿಲ್ಲನ್ನು ಮೂವ್ ಮಾಡುತ್ತಾರೆ. ಇದು ಬರೀ ಇಂಟ್ರಡ್ಯೂಸ್ ಮಾಡುವುದು ಅಷ್ಟೆ.

ಶ್ರೀ ಪಿ.ಜಿ.ಆರ್.ಸಿಂಧ್ಯ: ಮಾನ್ಯ ಅಧ್ಯಕ್ಷರೇ, ನುಸಿ ರೋಗದ ವಿಚಾರದಲ್ಲಿ ನಾವು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೇವೆ. ನಾವು, ನಿಮ್ಮ ಮನಸ್ಸನ್ನು ಒಲಿಸಿಕೊಳ್ಳಬೇಕಾಗುತ್ತದೆ, ನಿಮಗೆ ಅನೇಕ ವಿಚಾರಗಳನ್ನು ತಿಳಿಸಬೇಕಾಗುತ್ತದೆ. ನಾವು ವಿರೋಧ ಪಕ್ಷದವರು ಇರುವುದು 18 ಜನ, ಅವರೊಂದು 40 ಜನ ಇದ್ದಾರೆ ಆದರೆ, ಅವರಿಗೆ ಅಭೂತಪೂರ್ವವಾದ ಬೆಂಬಲ ಇದೆ. 136 ಪ್ಲಸ್ 10 ಪ್ಲಸ್ ಏನೇನೋ ನನಗೆ ಗೊತ್ತಿಲ್ಲ. ಅದರಿಂದ, ದಯವಿಟ್ಟು ತಾವು ನಮ್ಮ ಮಾತನ್ನು ಕೇಳಬೇಕು. ಅನಂತರ ತಮ್ಮ ತೀರ್ಮಾನ ಫೈನಲ್. ಈಗ ತೆಂಗಿನ ನುಸಿ ರೋಗದ ಬಗ್ಗೆ ನಾವು ನಿಲುವಳಿ ಸೂಚನೆಯನ್ನು ಕಳುಹಿಸಿಕೊಟ್ಟಿದ್ದೇವೆ. ತಾವೇ ಮಾಡಿ ಕಳುಹಿಸಿರತಕ್ಕಂಥ ಇವತ್ತಿನ ಕಾರ್ಯಕ್ರಮದ ಪ್ರಕಾರವಾಗಿ ಇದು ಮುಂಚೆ ತೀರ್ಮಾನವಾಗಬೇಕು. ಈಗ ತಾವೇನು ಹೇಳುತ್ತಿದ್ದೀರಿ. ರೂಲ್ 69ರಲ್ಲಿ ಹೆಚ್ಚಿಗೆ ಸಮಯ ಇರುತ್ತದೆ, ಅದಕ್ಕೋಸ್ಕರ ಅದರಲ್ಲಿ ಚರ್ಚೆ ಮಾಡೋಣ ಎಂಬ ವಿಚಾರವನ್ನು ಪ್ರಸ್ತಾಪ ಮಾಡಿದ್ದೀರಿ. ನಮ್ಮ ತಕರಾರು ಏನೆಂದರೆ ಮಾನ್ಯ ಮಂತ್ರಿಗಳು....

MR.SPEAKER: It is only a mutual obligation and cooperation between the ruling party and the opposition party.

ಶ್ರೀ ಪಿ.ಜಿ.ಆರ್.ಸಿಂಧ್ಯ: ಸಾರ್, ದಯವಿಟ್ಟು ನಮ್ಮ ಮಾತನ್ನು ಕೇಳಿ. ಪಂಚಾಯತ್ ರಾಜ್ ಬಿಲ್ಲನ್ನು ಅಮೆಂಡ್‌ಮೆಂಟ್ ಮಾಡುವ ಬಗ್ಗೆ ಮತ್ತು ಆ ಬಿಲ್ಲನ್ನು

ಇಂಟ್ರಡ್ಯೂಸ್ ಮಾಡುವ ಬಗ್ಗೆ ಹೊರಟಿದ್ದಾರೆ. ಆ ಇಂಟ್ರಡಕ್ಷನ್ ಬಗ್ಗೆ ನಾವೂ ಸ್ವಲ್ಪ ಮಾತನಾಡುವುದಿದೆ. ಅದು ಸುಮಾರು 2 ಗಂಟೆಯ ಕಾಲವನ್ನು ತೆಗೆದುಕೊಳ್ಳುತ್ತದೆ. ಅದಕ್ಕೋಸ್ಕರವಾಗಿ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಈ ನುಸಿ ರೋಗದ ಬಗ್ಗೆ ಅವಕಾಶ ಮಾಡಿಕೊಡಿ. ಅದಾದ ಮೇಲೆ ಬಿಲ್ ಬಗ್ಗೆ ಚರ್ಚೆ ಮಾಡೋಣ. That will take a few hours.

ಶ್ರೀ ಜಿ.ರಾಜುಗೌಡ: ಮಾನ್ಯ ಅಧ್ಯಕ್ಷರೇ, ತಮ್ಮ ಅನುಮತಿ ಮೇಲೆ ಅವರು ಬಿಲ್ಲನ್ನು ಮೂವ್ ಮಾಡಲಿ. ಈಗಾಗಲೇ ನುಸಿರೋಗದ ವಿಷಯ ಕಾರ್ಯಕ್ರಮದ ಪಟ್ಟಿಯಲ್ಲಿ ಮೊದಲು ಪ್ರಿಂಟ್ ಆಗಿ ಬಂದಿದೆ. ನೀವು ಹೇಳಿದ ಪ್ರಕಾರ ಬರುವುದಿಲ್ಲ. ದಯಮಾಡಿ ನಾನು ಗಮನ ಸೆಳೆಯುವುದಕ್ಕೆ ಅವಕಾಶ ಮಾಡಿಕೊಡಿ.

ಅಧ್ಯಕ್ಷರು: ನೀವೇನು ಗಮನ ಸೆಳೆಯುವ ಸೂಚನೆ ಕೊಟ್ಟಿದ್ದೀರಿ, ಅದರ ಬಗ್ಗೆಯೇ ರೂಲ್ 69 ಪ್ರಕಾರ, ಅದನ್ನು ಕನ್‌ವರ್ಟ್ ಮಾಡಿ ಇವತ್ತೇ ತೆಗೆದುಕೊಳ್ಳುತ್ತೇನೆ.

ಶ್ರೀ ಜಿ.ರಾಜುಗೌಡ: ಆಮೇಲೆ ನೀವೇನೋ ಮಾಡುತ್ತೀರಿ. ಆದರೆ, ಇವತ್ತಿನ ಕಾರ್ಯಕ್ರಮ ಪಟ್ಟಿಯಲ್ಲಿ ಈ ವಿಷಯ ಬಂದಿದೆ. ದಯಮಾಡಿ ತಾವು ಅನುಮತಿ ಕೊಡಿ.

ಅಧ್ಯಕ್ಷರು: ಇವತ್ತೇ ತೆಗೆದುಕೊಳ್ಳುತ್ತೇನೆ. ಅವರು 5 ನಿಮಿಷದಲ್ಲಿ ಆ ಬಿಲ್ಲನ್ನು ಇಂಟ್ರಡ್ಯೂಸ್ ಮಾಡುತ್ತಾರೆ. ಆಮೇಲೆ ನಿಮ್ಮ ವಿಷಯವನ್ನು 69ರ ಅಡಿಯಲ್ಲಿ ತೆಗೆದುಕೊಳ್ಳುತ್ತೇನೆ. ನೀವೂ ಮಾತನಾಡಿ, ನಿಮಗೆ ಎಷ್ಟು ಸಮಯ ಬೇಕೋ ಅಷ್ಟು ಕೊಡುತ್ತೇನೆ. ಮೊದಲು ನಿಮ್ಮನ್ನೇ ಕರೆಯುತ್ತೇನೆ.

ಶ್ರೀ ಎ.ರಾಮದಾಸ್: ಮಾನ್ಯ ಅಧ್ಯಕ್ಷರೇ, ಸದನದಲ್ಲಿ ಶೂನ್ಯವೇಳೆಗೆ ಅವಕಾಶ ಮಾಡಿಕೊಟ್ಟಿದ್ದೀರಿ. ಈಗ ಆರೋಗ್ಯ ಮಂತ್ರಿಗಳೂ ಇಲ್ಲಿದ್ದಾರೆ. ನಾನೇನು ಹೆಚ್ಚು ಸಮಯ ತೆಗೆದುಕೊಳ್ಳುವುದಿಲ್ಲ. ನೀವು ನುಸಿರೋಗದ ವಿಷಯವನ್ನು ರೂಲ್ 69ರಲ್ಲಿ ತೆಗೆದುಕೊಂಡರೆ ಶೂನ್ಯವೇಳೆಯಲ್ಲಿ ನಾವು, ನಮ್ಮ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕಾಗುವುದಿಲ್ಲ. ಅರ್ಜೆಂಟ್ನಿ ಇರುವ ದೃಷ್ಟಿಯಿಂದ ತಮ್ಮ ಅಪ್ಪಣೆ ಪಡೆದು ಒಂದು ವಿಚಾರವನ್ನು ಹೇಳುತ್ತೇನೆ.

MR.SPEAKER: It is only a mutual obligation and co-operation between the ruling party and the opposition party.

ಶ್ರೀ ಪಿ.ಜಿ.ಆರ್.ಸಿಂಧ್ಯ: ತಾವು ಹೇಳಿರತಕ್ಕ ಎಲ್ಲಾ ವಿಚಾರಗಳಿಗೂ ನಾವು

ಇದುವರೆಗೂ ಸಹಿತ ಸಹಕಾರವನ್ನು ಕೊಟ್ಟಿದ್ದೇವೆ. ಮುಂದೆಯೂ ಸಹಿತ ಸಹಕಾರವನ್ನು ಕೊಡುತ್ತೇವೆ. ನಿಮಗೆ ಅಸಹಕಾರ ಕೊಡತಕ್ಕ ಪ್ರಶ್ನೆ ನಮ್ಮ ಕಡೆಯಿಂದ ಉದ್ಭವವಾಗುವುದಿಲ್ಲ. ಆದರೆ, ದಯಮಾಡಿ ನಮ್ಮ ಭಾವನೆಗಳಿಗೆ ಸ್ಪಂದಿಸಬೇಕೆಂದು ರಿಕ್ವೆಸ್ಟ್ ಮಾಡುತ್ತೇನೆ. ಈ ಕಡೆ ಕುಳಿತಿರತಕ್ಕ ಶಾಸಕರು ಈ ವಿಷಯದ ಮೇಲೆ ಬಹಳಷ್ಟು ವಿಚಾರಗಳನ್ನು ಹೇಳುವುದಿದೆ. It is a very dearer and nearer subject to all of us. Therefore, we would like to discuss at the introduction stage, not at the consideration stage. ದಯವಿಟ್ಟು ನುಸಿ ರೋಗದ ವಿಚಾರದಲ್ಲಿ ಚರ್ಚೆಗೆ ಅವಕಾಶ ಮಾಡಿಕೊಡಿ. ಅದಾದ ಮೇಲೆ ಆ ಬಿಲ್ಲನ್ನು ತೆಗೆದುಕೊಳ್ಳೋಣ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೇ, ಆ ಬಿಲ್ ಇಂಟ್ರಡಕ್ಷನ್ ಬಗ್ಗೆ ಚರ್ಚೆ ಆಗಬೇಕಾಗುತ್ತದೆ. ಏಕೆಂದರೆ ಅದರ ಬಗ್ಗೆಯೂ ಗಂಭೀರವಾದ ಕೆಲವು ವಿಷಯಗಳು ಇವೆ. ಆದರೆ, ಮೊದಲು ಈ ನುಸಿ ರೋಗದ ಬಗ್ಗೆ ಚರ್ಚೆಯಾಗಲಿ. ನಂತರ ಆ ಬಿಲ್ಲಿನ ಬಗ್ಗೆ ವಿಚಾರ ಮಾಡೋಣ.

ಅಧ್ಯಕ್ಷರು: ಹಾಗಾದರೆ ಈ ನುಸಿ ರೋಗದ ಬಗ್ಗೆ ಸಂಜೆ 5-30ರೊಳಗೆ ಮುಗಿಸೋಣ. ಅನಂತರ ಈ ಬಿಲ್ ಇಂಟ್ರಡ್ಯೂಸ್ ಮಾಡೋಣ. ಮೊದಲು ಅವರ ಕಾಲಿಂಗ್ ಅಟೆನ್‌ಷನ್ ಅಡ್ಮಿಟ್ ಮಾಡಿದ್ದು ಅನಂತರ ನಿಮ್ಮದು ಬಂದಿದ್ದು. At any cost the Bill should be introduced to-day.

ಶ್ರೀ ಜೆ.ರಾಜುಗೌಡ: ನಾನು ನುಸಿ ರೋಗದ ಬಗ್ಗೆ ತೋಟಗಾರಿಕಾ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಸಿ.ಭೈರೇಗೌಡ: ನಾವು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೇವೆ. It gets precedence. ನಮ್ಮ ಮಾತಿಗೆ ತಾವು ಒಪ್ಪಿಕೊಂಡು, ಇದನ್ನು ರೂಲ್ 69ಕ್ಕೆ ಕನ್‌ವರ್ಟ್ ಮಾಡುತ್ತೇವೆಂದು ಹೇಳಿದ್ದೀರಿ. ಆಗಬಹುದು. ಅವರು ಮಾತನಾಡುವುದಿದ್ದರೆ, ಅವರೂ ಕೂಡ ಮಾತನಾಡಲಿ.

ಅಧ್ಯಕ್ಷರು: ಅವರು ಕಾಲಿಂಗ್ ಅಟೆನ್‌ಷನ್ ಓದಿ ಹೇಳಿಬಿಡುತ್ತಾರೆ. ಆಮೇಲೆ ನೀವೇ ಮಾತನಾಡಿ.